ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 8
ಜೂನ್ 2023

SHRIDEVI ANTARANGA
Monthly Magazine




SHRIDEVI
EDUCATION



ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ಗ್ರಾಮೀಣ ಪ್ರದೇಶದಲ್ಲಿರುವ ಬಡ ಕೂಲಿಕಾರ್ಮಿಕರ ಸ್ಥಿತಿ ಇದಕ್ಕಿಂತ ಉತ್ತಮವಾಗಿಲ್ಲ. ಹಾಗಾಗಿ ನರೇಗಾದ ಕೆಲಸಕ್ಕೆ ಸಾಕಷ್ಟು ಡಿಮ್ಯಾಂಡ್ ಎಲ್ಲೆಡೆ ಇದೆ. ಇಂತಹ ಕುಟುಂಬಗಳಿಗೆ ಅನ್ನಭಾಗ್ಯ, ಗೃಹಲಕ್ಷ್ಮಿ ಮತ್ತು ಉಚಿತ ಬಸ್ಸು ಪ್ರಯಾಣ ತುಂಬಾ ಅನುಕೂಲಕರವಾಗಿದೆ.

## ಅರ್ಹರಿಗೆ ಸಿಗಲಿ ಸವಲತ್ತು



2023ರ ಮೇ 20ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಯಾಗಿ ಶ್ರೀ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಅಧಿಕಾರ ಸ್ವೀಕರಿಸುವ ಮೊದಲೇ ಟಿ.ವಿ. ಮಾಧ್ಯಮಗಳು ಮತ್ತು ವಿರೋಧ ಪಕ್ಷಗಳು ಚುನಾವಣೆಯ ಪೂರ್ವದಲ್ಲಿ ಕಾಂಗ್ರೆಸ್‌ಪಕ್ಷ ಜನತೆಗೆ ನೀಡಿದ್ದ ಐದು ಅಶ್ವಾಸನೆಗಳು ಯಾವಾಗ ಜಾರಿಯಾಗುತ್ತದೆ ಎಂಬ ತಗಾದೆ ತೆಗೆದಿದ್ದವು. ಮೊದಲ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ಗ್ಯಾರಂಟಿಗಳಿಗೆ ಸಚಿವ ಸಂಪುಟದ ಅನುಮೋದನೆ ಪಡೆದು ಆದೇಶ ಸಹ ಹೊರಡಿಸಿದ್ದರು. 'ಗೃಹಜ್ಯೋತಿ' 'ಗೃಹಲಕ್ಷ್ಮೀ' 'ಅನ್ನಭಾಗ್ಯ' 'ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ' ಮತ್ತು 'ಯುವನಿಧಿ' ಕಾರ್ಯಕ್ರಮಗಳೇ ಕಾಂಗ್ರೆಸ್‌ಪಕ್ಷ ನೀಡಿದ್ದ ಐದು ಅಶ್ವಾಸನೆಗಳಾಗಿದ್ದವು.

ಮೊದಲ ಸಚಿವ ಸಂಪುಟದ ನಂತರ ಜೂನ್ 2ರಂದು ಮತ್ತೆ ಸಚಿವ ಸಂಪುಟ ಈ ಕಾರ್ಯಕ್ರಮಗಳ ವಿಚಾರದಲ್ಲಿ ವ್ಯಾಪಕ ಚರ್ಚೆ ನಡೆಸಿ ಅದಕ್ಕೆ ಸಂಪನ್ಮೂಲ ಒದಗಿಸಿ ಜಾರಿಗೆ ಅನುಕೂಲವಾಗುವ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಇಂತಹ ಮಹತ್ವದ ಮತ್ತು ಬೃಹತ್ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿರುವ ಸಿದ್ದರಾಮಯ್ಯ ಅವರ ಸರ್ಕಾರ ಅಭಿನಂದನೆಗೆ ಅರ್ಹವಾಗಿದೆ.

ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ವಿರೋಧಿಸುವವರು ಕರ್ನಾಟಕದ ಗ್ರಾಮೀಣ ಮತ್ತು ನಗರ ಪ್ರದೇಶದ ಕೊಳೆಗೇರಿಗಳಲ್ಲಿ ವಾಸ ಮಾಡುವ ಜನರ ಬದುಕನ್ನು ಒಮ್ಮೆ ನೋಡಬೇಕು. ನಾನು ಇಪ್ಪತ್ತು ವರ್ಷಗಳ ಹಿಂದಿನ ವಿಚಾರವನ್ನು ಹೇಳುತ್ತಿಲ್ಲ. ಇಂದಿನ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ನಮ್ಮ ಉತ್ತರ ಕರ್ನಾಟಕ ಗ್ರಾಮೀಣ ಪ್ರದೇಶದ ಜನರು ಬೆಂಗಳೂರು ಮತ್ತು ಇತರೆ ಬೃಹತ್ ನಗರಗಳಲ್ಲಿ ವಾಸಿಸುತ್ತಿದ್ದಾರೆ. ಅವರು ಕಟ್ಟಡ ನಿರ್ಮಿಸುವ ಕೂಲಿಕಾರ್ಮಿಕರು. ಅವರದ್ದು ಅಲೆಮಾರಿ ಜೀವನ. ಒಂದು ಕಟ್ಟಡದ ಕೆಲಸ ಮುಗಿಯುತ್ತಲೇ ಮೇಸ್ತ್ರಿ ಹೇಳಿದ ಕಡೆ ಟೆಂಟು ಎತ್ತಿಕೊಂಡು ಹೋಗಬೇಕು. ಆ ಕಾರ್ಮಿಕರಿಗೆ ಇದೊಂದು ಅನಿವಾರ್ಯ. ರಾತ್ರಿ ಮಾತ್ರ ಅಡುಗೆ ಮಾಡುವ ಇವರು ಬೆಳಗ್ಗೆ ಸಹ ಅದನ್ನೇ ತಿಂದು ಕೆಲಸಕ್ಕೆ ಹೋಗುತ್ತಾರೆ. ಚಿಕ್ಕ ಮಕ್ಕಳು ಮರಳಿನಲ್ಲಿ ಆಟವಾಡಿಕೊಂಡಿದ್ದರೆ ಸ್ವಲ್ಪ ದೊಡ್ಡ ಮಕ್ಕಳು ತಂದೆ ತಾಯಿಗಳಿಗೆ ನೆರವು ಆಗುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿರುವ ಬಡ ಕೂಲಿಕಾರ್ಮಿಕರ ಸ್ಥಿತಿ ಇದಕ್ಕಿಂತ ಉತ್ತಮವಾಗಿಲ್ಲ. ಹಾಗಾಗಿ ನರೇಗಾದ ಕೆಲಸಕ್ಕೆ ಸಾಕಷ್ಟು ಡಿಮ್ಯಾಂಡ್ ಎಲ್ಲೆಡೆ ಇದೆ. ಈ ಕುಟುಂಬಗಳು ಅನಾರೋಗ್ಯಕ್ಕೆ ತುತ್ತಾದರೆ ಅವರಿಗೆ ಯಾವುದೇ ರಕ್ಷಣೆಯಿಲ್ಲ. ಇಂತಹ ಕುಟುಂಬಗಳಿಗೆ ಅನ್ನಭಾಗ್ಯ, ಗೃಹಲಕ್ಷ್ಮಿ ಮತ್ತು ಉಚಿತ ಬಸ್ಸು ಪ್ರಯಾಣ ತುಂಬಾ ಅನುಕೂಲಕರವಾಗಿದೆ.

ಈ ಕಲ್ಯಾಣ ಕಾರ್ಯಕ್ರಮಗಳು ವ್ಯರ್ಥ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತವೆ ಎನ್ನುವವರ ಮಾತಿನಲ್ಲಿ ಅರ್ಥವಿಲ್ಲ. ಅವರಿಗೆಲ್ಲಾ ಈ ಜನರು ಸದಾ ಬೇಡುತ್ತಿರಬೇಕು ಎಂಬ ಮನಃಸ್ಥಿತಿಯಿದೆ. 'ನಾವು ಆತ್ಮಗೌರವದಿಂದ ಬದುಕುತ್ತೇವೆ' ಎಂದು ಇವರು ಹೇಳಿದರೆ, ನಮ್ಮ ಬಿಟ್ಟಿ ಚಾಕರಿ ಮಾಡುವವರು ಯಾರು ಎಂಬುದು ಯೋಜನೆಗೆ ಆಕ್ಷೇಪ ತೆಗೆಯುತ್ತಿರುವವರು ಮಾತನಾಡದೆ ಕಳುಹಿಸುವ ಸಂದೇಶವಾಗಿರುತ್ತದೆ.

▶▶ 6ನೇ ಪುಟಕ್ಕೆ...

ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಪ್ರತಿದಿನ, ಪ್ರತಿನಿಮಿಷ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿರುತ್ತವೆ. ಹಿಂದಿನಂತೆ ತಲೆಯಿಂದ ಪಾದದವರೆಗೆ ಒಬ್ಬನೇ ವೈದ್ಯನೆಂಬ ಪರಿಕಲ್ಪನೆ ಮಾಯವಾಗಿ ಈಗ ಪ್ರತಿಯೊಂದು ಅಂಗಾಂಗಕ್ಕೂ ತಜ್ಞ ವೈದ್ಯರುಗಳಿರುವುದನ್ನು ಕಾಣಬಹುದಾಗಿದೆ. ಈ ಮಾತು ಅರೆವೈದ್ಯಕೀಯ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಹಿಂದೆ ನರ್ಸ್‌ಗಳೆಂದರೆ ಡಿಪ್ಲೊಮಾ ಮತ್ತು ಬಿ.ಎಸ್‌ಸಿ. ಮಾಡಿದವರನ್ನು ಕಾಣಬಹುದಾಗಿತ್ತು. ಈ ಅರೆವೈದ್ಯಕೀಯ ಸಿಬ್ಬಂದಿ ಹೆರಿಗೆಯ ವಿಚಾರದಲ್ಲೂ ಪರಿಣಿತರಿದ್ದರು. ಹಾಗೇ ಆಪರೇಷನ್ ಕೊಠಡಿಯಲ್ಲೂ ಸೇವೆ ಸಲ್ಲಿಸುತ್ತಿದ್ದರು. ಆದರೆ ಇಂದು ಆಪರೇಷನ್ ಥಿಯೇಟರ್‌ನಲ್ಲಿ ಕೆಲಸ ಮಾಡುವ ನರ್ಸ್‌ಗಳು ಪ್ರತ್ಯೇಕವಾಗಿದ್ದಾರೆ. ಅವರು ಅದೇ ವಿಚಾರದಲ್ಲಿ ವಿಶೇಷವಾದ ಅಧ್ಯಯನ ಮಾಡಿರುತ್ತಾರೆ. ಹಾಗೇ ಬೇರೆ ವಿಚಾರಗಳಿಗೂ ಪ್ರತ್ಯೇಕ ಅರೆವೈದ್ಯಕೀಯ ಸಿಬ್ಬಂದಿಗಳಿರುತ್ತಾರೆ. ಅವರಲ್ಲಿ ಅನೇಕರು ಸ್ನಾತಕೋತ್ತರ ಪದವಿ ಗಳಿಸಿರುತ್ತಾರೆ. ಕೆಲವರು ಪಿಹೆಚ್.ಡಿ. ಸಹ ಮಾಡಿರುತ್ತಾರೆ.

ಹಿಂದೆ ಯಾವುದಾದರೂ ಅಪಘಾತವಾದರೆ ಮೂಳೆ ವೈದ್ಯರನ್ನು ಹುಡುಕಿಕೊಂಡು ಹೋಗುತ್ತಿದ್ದರು. ಅಪಘಾತದ ಸಂದರ್ಭದಲ್ಲಿ ತಲೆಗೆ ಪೆಟ್ಟುಬಿದ್ದು ಮಿದುಳಿಗೆ ಅನಾಹುತವಾಗಿರಬಹುದು. ಹೀಗಾಗಿ ಇಂದು ಅಪಘಾತದ ಸಂದರ್ಭದಲ್ಲಿ ನ್ಯೂರೋ ತಜ್ಞರಿಗೂ ಮಹತ್ವ ದೊರೆಯುತ್ತಿದೆ. ತುಮಕೂರಿನ ಶಿರಾಗೇಟ್ ಬಳಿ ಇರುವ ಶ್ರೀದೇವಿ ಮೆಡಿಕಲ್ ಕಾಲೇಜಿನಲ್ಲಿ ನ್ಯೂರೋ ವಿಭಾಗ ನಿಧಾನವಾಗಿ ತನ್ನ ಮಹತ್ವವನ್ನು ಸ್ಥಾಪಿಸಿಕೊಳ್ಳುತ್ತಿದೆ. ಮೂಲಭೂತ ಸೌಕರ್ಯಗಳನ್ನು ಈ ವಿಭಾಗಕ್ಕೆ ಆದ್ಯತೆಯ ಮೇಲೆ ಕಲ್ಪಿಸಿಕೊಡಲಾಗುತ್ತಿದೆ.

ಹಿಂದೆ 'ಪಾರ್ಶ್ವವಾಯು' 'ಲಕ್ವ' 'ಮಿದುಳಿನ ಆಘಾತ' ಎಂದೆಲ್ಲಾ ಕರೆಯುವ 'ಸ್ಟ್ರೋಕ್' ಈಗ ಮಿದುಳಿಗೆ ಸಂಬಂಧಿಸಿದ ಕಾಯಿಲೆ ಎಂಬುದು ಜನಸಾಮಾನ್ಯರಿಗೂ ತಿಳಿಯುತ್ತಿದೆ. ಪಾರ್ಶ್ವವಾಯು ರೋಗಕ್ಕೆ ತುತ್ತಾದವರನ್ನು ಮೊದಲು ನಾಟಿಔಷಧ ಕೊಡುವವರ ಬಳಿ ಕರೆದುಕೊಂಡು ಹೋಗಿ ಅವರ ಚಿಕಿತ್ಸೆ ಫಲಕಾರಿಯಾಗದ ಸಂದರ್ಭದಲ್ಲಿ ಆಸ್ಪತ್ರೆಗೆ ಕರೆ ತರಲಾಗುತ್ತಿತ್ತು. ಅಷ್ಟು ಹೊತ್ತಿಗೆ ಅವರು ಶಾಶ್ವತವಾಗಿ ಅಂಗವಿಕಲರಾಗುತ್ತಿದ್ದರು. ಈಗ ಜನರು ಮೊದಲೇ ನ್ಯೂರೋ ವೈದ್ಯರ ಸೇವೆ ಪಡೆಯಲು ಮುಂದಾಗುತ್ತಿರುವುದು ಸಂತೋಷದ ಸಂಗತಿ.

ಈ ದಿಸೆಯಲ್ಲಿ ಶ್ರೀದೇವಿ ಮೆಡಿಕಲ್ ಕಾಲೇಜಿನಲ್ಲಿ ನ್ಯೂರೋ ವಿಭಾಗ ಹೊಸ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. 'ಬೆನ್ನುನೋವು' 'ತೋಳು–ಕಾಲುಗಳಲ್ಲಿ ನಿಶ್ಯಕ್ತಿಯ ಭಾವನೆ' 'ಕೈಕಾಲುಗಳಲ್ಲಿ ದೌರ್ಬಲ್ಯ' 'ಪಾರ್ಶ್ವವಾಯು' 'ಕುತ್ತಿಗೆ ನೋವು ಅಥವಾ ಬಿಗಿತ' 'ಬೆಳಗಿನ ಸಮಯದಲ್ಲಿ ತೀವ್ರವಾದ ತಲೆ ನೋವು' 'ದಿನದ ಬಹುಮಟ್ಟಿನ ಸಮಯ ಖಿನ್ನತೆ' 'ಪಾರ್ಕಿನ್‌ಸನ್ಸ್' 'ಬೆನ್ನುಮೂಳೆ ಮುರಿತ' 'ತಲೆಗೆ ಪೆಟ್ಟು' 'ಮಿದುಳಿನಲ್ಲಿ ಗೆಡ್ಡೆ' 'ಬೆನ್ನುಹುರಿ ಅಂದರೆ ಡಿಸ್ಕ್‌ನ ಸಮಸ್ಯೆ– ಮೊದಲಾದ ನ್ಯೂರೋ ಕಾಯಿಲೆಗಳಿಗೆ ಈ ಕೇಂದ್ರದಲ್ಲಿ ಉತ್ತಮ ಚಿಕಿತ್ಸೆ ಕೊಡಲಾಗುತ್ತದೆ.

ಇದೀಗ ಈ ಕೇಂದ್ರದಲ್ಲಿ ಇಬ್ಬರು ಅನುಭವಶಾಲಿಗಳಾದ ನ್ಯೂರೋ ಸರ್ಜನ್‌ಗಳಿದ್ದಾರೆ. ಮೊದಲಿಗೆ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ 32 ವರ್ಷ ಸೇವೆ ಸಲ್ಲಿಸಿ ನ್ಯೂರೋ ಕಾಯಿಲೆಗೆ ಸಂಬಂಧಪಟ್ಟ ಅನೇಕ ಶಸ್ತ್ರಚಿಕಿತ್ಸೆಗಳನ್ನು ಮಾಡಿ ಅಪಾರ ಅನುಭವ ಗಳಿಸಿರುವ ಅಂತಾರಾಷ್ಟ್ರೀಯ ಖ್ಯಾತಿಯ ಡಾ.ಎಸ್.ಸಂಪತ್ ಅವರ ಸೇವೆ ಲಭ್ಯವಿದೆ. ಎಂಡೋಸ್ಕೋಪಿ ಶಸ್ತ್ರಚಿಕಿತ್ಸೆಯಲ್ಲಿ ಡಾ.ಎಸ್.ಸಂಪತ್ ನಿಷ್ಣಾತರೆಂದು ಪ್ರಸಿದ್ಧರಾಗಿದ್ದಾರೆ. ನ್ಯೂರೋ ಕಾಯಿಲೆಗಳಿಗೆ ಅಗತ್ಯವಾದ ಚಿಕಿತ್ಸೆ ಕೊಡುವುದರಲ್ಲಿ ಅವರು ಸಿದ್ಧಹಸ್ತರು ಎನ್ನುವುದು ಈ ಕ್ಷೇತ್ರದಲ್ಲಿ ಕೆಲಸ ಮಾಡುವವರ ಅಭಿಪ್ರಾಯ.

ನ್ಯೂರೋ ವಿಭಾಗದಲ್ಲಿ ಕಳೆದ 16 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಾ.ಮಹಮ್ಮದ್ ಅಲಿ ಸುತಾರ್ ಅವರು ತುಂಬಾ ಉತ್ಸಾಹ ಮತ್ತು ಬದ್ಧತೆಯಿಂದ ಕರ್ತವ್ಯ ನಿರ್ವಹಿಸುವ ಭರವಸೆ ಮೂಡಿಸಿದ್ದಾರೆ. ವಿವಿಧ ನ್ಯೂರೋ ಕಾಯಿಲೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಇಂತಹ ಅಗತ್ಯವನ್ನು ಕುರಿತು ಡಾ.ಎಸ್.ಸಂಪತ್ ಅವರು ಸನ್ನಿವೇಶವೊಂದರ ಮೂಲಕ ವಿವರಿಸಿದರು. ಕೆಲವು ವರ್ಷಗಳ ಹಿಂದೆ ದಿಢೀರನೆ ನಿಧನರಾದ ಕನ್ನಡ ಚಲನಚಿತ್ರದ ನಟರಿಗೆ ಸಂಬಂಧಪಟ್ಟ ಸಂಗತಿಯಿದು. ಆ ನಟನಿಗೆ 'ಅನ್ಯೂರಿಸಮ್' (Aneurysm) ಆಗಿತ್ತು. ಮಿದುಳಿನ ರಕ್ತನಾಳ ದುರ್ಬಲವಾಗಿರುವ ಜಾಗದಲ್ಲಿ ಒತ್ತಡ ಉಂಟಾಗಿ ಆ ಜಾಗ ಉಬ್ಬಿಕೊಳ್ಳುತ್ತದೆ. ಅದು ಬಲೂನಿನ ಆಕಾರ ಪಡೆಯುತ್ತದೆ. ಆಕಸ್ಮಿಕವಾಗಿ ಬಲೂನ್ ತರಹದ ಗುಳ್ಳೆ ಒಡೆದಾಗ ನಾಳದಿಂದ ರಕ್ತ ಹೊರಬಂದು ಮಿದುಳಿನಲ್ಲೇ ಹೆಪ್ಪುಗಟ್ಟಬಹುದು. ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿದರೆ ಪಾರ್ಶ್ವವಾಯುವಿಗೂ ಕಾರಣವಾಗುವ ಸಂಭವವಿರುತ್ತದೆ. ವ್ಯಕ್ತಿಗೆ ಇಂತಹ ಕಾಯಿಲೆ ಕಾಣಿಸಿಕೊಂಡಾಗ ಅಸಾಧಾರಣ ತಲೆನೋವು ಬರುತ್ತದೆ, ತಲೆಯಲ್ಲಿ ಯಾರೋ ಬಾಂಬ್ ಇಟ್ಟಿದ್ದಾರೆ ಎನ್ನುವ ಅನುಭವವಾಗುತ್ತದೆ. ಇಂತಹ ರೋಗಿಗೆ ತಕ್ಷಣ ಆಪರೇಷನ್ ಮಾಡಿ ಹೆಪ್ಪುಗಟ್ಟಿರುವ ಜಾಗವನ್ನು ಸರಿ ಮಾಡಬೇಕಾಗಿರುತ್ತದೆ. ಇದರಲ್ಲಿ ಅಸಡ್ಡೆ ತೋರಬಾರದು. ವ್ಯಕ್ತಿಗೆ 'ಅನ್ಯೂರಿಸಮ್' ಕಾಯಿಲೆಯ ಲಕ್ಷಣ ಕಾಣಿಸಿಕೊಂಡರೆ ತಕ್ಷಣ ನ್ಯೂರೋ ವೈದ್ಯರ ಬಳಿ ಹೋದಾಗ ಎಂ.ಆರ್.ಐ. ಸ್ಕ್ಯಾನ್ ಮಾಡಿ ಆ ಜಾಗಕ್ಕೆ ಸ್ಟೆಂಟ್ ಹಾಕುವ ಕಾರ್ಯವನ್ನು ಮಾಡಲಾಗುತ್ತದೆ. 'ಅನ್ಯೂರಿಸಮ್'ನಿಂದ ಯಾವುದೇ ಅಪಾಯವಾಗದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ನ್ಯೂರೋ ತಜ್ಞರನ್ನು ಕಾಣಬೇಕು" ಎಂಬುದು ಡಾ.ಎಸ್.ಸಂಪತ್ ಅವರ ಅಭಿಪ್ರಾಯವಾಗಿದೆ.



ಡಾ.ಎಸ್.ಸಂಪತ್



ಡಾ.ಮಹಮ್ಮದ್ ಅಲಿ ಸುತಾರ್

**ನ್ಯೂರೋ ಸಮಸ್ಯೆಗಳಿಗೆ ಸಂಪರ್ಕಿಸಿ:**
**ಡಾ.ಎಸ್.ಸಂಪತ್: 9449241906,**
**ಡಾ.ಮಹಮ್ಮದ್ ಅಲಿ ಸುತಾರ್: 9945500321**




**ಬೆಳೆಯುತ್ತಿರುವ ಜ್ಞಾನದ ಜೊತೆ ಈ ಮಕ್ಕಳು ಹೆಜ್ಜೆ ಹಾಕಬೇಕಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲಿಷ್ ಮತ್ತು ಗಣಿತದ ವಿಚಾರದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಎನ್ನುವ ರೀತಿಯಲ್ಲಿ ನಪಾಸಾಗುತ್ತಿದ್ದಾರೆ.**

# ಶಿಕ್ಷಕ ಆಚಾರ್ಯನಾಗಬೇಕು

ಸಂಪಾದಕರ ವಾಣಿ



**ಅಂಬಿಕಾ ಎಂ ಹುಲಿನಾಯ್ಕರ್**
ಆಡಳಿತಾಧಿಕಾರಿ,
ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು

ಜೂನ್ ಮಾಸವೆಂದರೆ ಮಕ್ಕಳು ಮತ್ತು ಪೋಷಕರಿಗೆ ಸಂಭ್ರಮದ ದಿನ. ಪ್ರತಿಯೊಬ್ಬರಿಗೂ ತಾವು ಸ್ಕೂಲಿಗೆ ಹೋದ ದಿನಗಳು ನೆನಪಿಗೆ ಬಂದು, ಈಗ ರೋಮಾಂಚನವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಶಾಲೆಗೆ ಮಕ್ಕಳು ಹೋಗುವ ದಿನದಂದು ತಂದೆ-ತಾಯಿಗಳ ಮುಖದಲ್ಲಿ ಎಂತಹ ಹರ್ಷವಿರುತ್ತದೆ.

ಇನ್ನು ವಿದ್ಯಾರ್ಥಿ ಮೂರು ಅಥವಾ ನಾಲ್ಕನೆ ತರಗತಿಗೆ ಹೋಗುತ್ತಾರೆ ಎಂದರೆ ಅವರ ಸಂಭ್ರಮ ಮೇ ತಿಂಗಳಿಂದಲೇ ಪ್ರಾರಂಭವಾಗುತ್ತದೆ. ಖಾಸಗಿ ಶಾಲೆಯಲ್ಲಿ ಓದಿಸುವ ಮಕ್ಕಳ ತಂದೆ-ತಾಯಿಗಳು ಇದಕ್ಕಾಗಿ ಐದಾರು ತಿಂಗಳು ಮುಂಚೆಯೇ ಪ್ಲಾನ್ ಮಾಡಿರುತ್ತಾರೆ. ಫೀಜು ಮಾತ್ರವಲ್ಲ, ಯೂನಿಫಾರಂ, ಪುಸ್ತಕ, ಬಸ್ಸಿಗೆ ಕಟ್ಟಬೇಕಾದ ಶುಲ್ಕ ಒಂದೇ ಎರಡೇ! ಮಧ್ಯಮ ವರ್ಗದ ಕುಟುಂಬಗಳು ಒಂದೆರಡು ಮಕ್ಕಳಿದ್ದರೆ, ಖಾಸಗಿ ಶಾಲೆಯಲ್ಲಿ ಓದಿಸಲು ದೊಡ್ಡ ಹೋರಾಟವನ್ನೇ ಮಾಡುತ್ತಾರೆ. ಈ ದಂಪತಿಗಳು ತಮ್ಮ ವೈಯಕ್ತಿಕ ಬದುಕಿನಲ್ಲಿ ಅನೇಕ ತ್ಯಾಗಗಳನ್ನು ಮಾಡಬೇಕಾಗುತ್ತದೆ. ಖಾಸಗಿ ಶಾಲೆಯಲ್ಲಿ ಓದುವ ಮಧ್ಯಮ ವರ್ಗದ ಮಕ್ಕಳು ತಂದೆ-ತಾಯಿಗಳ ತ್ಯಾಗವನ್ನು ಸಾಮಾನ್ಯವಾಗಿ ಮರೆಯುವುದಿಲ್ಲ.

ರಾಷ್ಟ್ರದಲ್ಲಿ 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ' ಜಾರಿಗೆ ತರಲಾಗಿದೆ. ಪ್ರಧಾನಿ ಮಾನ್ಯ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು 34ವರ್ಷಗಳ ನಂತರ ಹೊಸ ಶಿಕ್ಷಣ ನೀತಿಯನ್ನು ದೇಶಾದ್ಯಂತ ಅನುಷ್ಠಾನ ಮಾಡುತ್ತಿದೆ. 1986ರಲ್ಲಿ ಜಾರಿಗೆ ಬಂದಿದ್ದ ಹೊಸ ಶಿಕ್ಷಣ ನೀತಿಯಲ್ಲಿ ಶಾಲಾ ಶಿಕ್ಷಣವನ್ನು 10+2 ಎಂದಷ್ಟೇ ವಿಭಾಗ ಮಾಡಲಾಗಿತ್ತು. 2022ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ 5+3+3+4 ಎಂದು ವಿಭಾಗಿಸಲಾಗಿದೆ. ಈ ಶಿಕ್ಷಣ ನೀತಿಯಲ್ಲಿ ಮಗುವಿನಲ್ಲಿರುವ ಸೃಜನಶೀಲ ಶಕ್ತಿಯನ್ನು ಪತ್ತೆ ಹಚ್ಚಿ ಅದನ್ನು ವೃದ್ಧಿಸುವಂತೆ ಮಾಡುವ ಗುರಿ ಹೊಂದಲಾಗಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಶಾಲಾ ಶಿಕ್ಷಣದಲ್ಲಿ ಮಾತೃಭಾಷೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಮಕ್ಕಳಿಗೆ ಕುತೂಹಲ ಮತ್ತು ಕಲಿಕೆಯನ್ನು ಹೆಚ್ಚು ಮಾಡುವುದು ಹೊಸ ಶಿಕ್ಷಣ ನೀತಿಯ ಗುರಿಯಾಗಿದೆ.

ಶಿಕ್ಷಣದಲ್ಲಿ ಸತ್ಫಲಗಳು ಕಾಣಬೇಕಾದರೆ ಶಾಲಾ ಪರಿಸರ ಮತ್ತು ಅಲ್ಲಿರುವ ಅಧ್ಯಾಪಕರ ಪಾತ್ರ ತುಂಬ ಮಹತ್ವಪೂರ್ಣದ್ದಾಗಿರುತ್ತದೆ. ದೊಡ್ಡ ಹೆಸರಿರುವ ಹಾಗೂ ಹೆಚ್ಚು ಹಣ ವಸೂಲಿ ಮಾಡುವ ಖಾಸಗಿ ಶಾಲೆಗಳಿಗಿಂತ, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಿದೆ. ಈ ಮಾತಿಗೆ ತುಮಕೂರು ಜಿಲ್ಲೆಯ ಅಂಕಿ-ಅಂಶಗಳನ್ನೇ ಉದಾಹರಣೆಗೆ ನೋಡಬಹುದಾಗಿದೆ. 2010-11ರ ಅಂಕಿ-ಅಂಶದ ಪ್ರಕಾರ ತುಮಕೂರು ಜಿಲ್ಲೆಯಲ್ಲಿ 1ರಿಂದ 5ನೆಯ ತರಗತಿಯವರೆಗೆ 1,77,693 ವ್ಯಾಸಂಗ ಮಾಡುತ್ತಿದ್ದಾರೆ. ಅದರಲ್ಲಿ 1992 ಸರ್ಕಾರಿ ಶಾಲೆಗಳು, 2 ಅನುದಾನಿತ ಶಾಲೆಗಳು ಮತ್ತು 67ಖಾಸಗಿ ಶಾಲೆಗಳಿವೆ. ಅದರ ಪ್ರಕಾರ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ಮಕ್ಕಳಿರುವುದನ್ನು ಕಾಣಬಹುದು. ಇನ್ನು 5ರಿಂದ 8ರವರೆಗ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಸಂಖ್ಯೆ 88,557, ಜಿಲ್ಲೆಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗಳೆಂದರೆ ಸರ್ಕಾರಿ ಶಾಲೆಗಳು 1336, ಅನುದಾನಿತ ಶಾಲೆಗಳು 59 ಮತ್ತು ಖಾಸಗಿ ಶಾಲೆಗಳು 362.



ಅದೇ ರೀತಿ ತುಮಕೂರು ಜಿಲ್ಲೆಯಲ್ಲಿ 800 ಪ್ರೌಢಶಾಲೆಗಳಿವೆ. ಅದರಲ್ಲಿ 1,02780 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಅದರಲ್ಲಿ ಸರ್ಕಾರಿ ಶಾಲೆಗಳು 285, ಅನುದಾನಿತ ಶಾಲೆಗಳು 312 ಮತ್ತು ಖಾಸಗಿ ಶಾಲೆಗಳು 213. ಲಭ್ಯವಿರುವ ಅಂಕಿ-ಅಂಶವೊಂದರಿಂದಲೇ ತುಮಕೂರು ಜಿಲ್ಲೆಯಲ್ಲಿ ಶೇಕಡ 75ರಷ್ಟು ಮಕ್ಕಳು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆಂಬ ಅಂಶ ತಿಳಿಯುತ್ತದೆ.

ಶಾಲಾ ಶಿಕ್ಷಣ ಎಷ್ಟು ಮಹತ್ವ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಮಗುವಿನ ಸುಂದರ ಭವಿಷ್ಯ ರೂಪಿಸಲು ಈ ಅವಧಿಯಲ್ಲಿ ತಳಪಾಯ ಹಾಕಲಾಗುತ್ತದೆ. ಜಾರ್ಜ್ ವಾಷಿಂಗ್‌ಟನ್ ಅವರು ಶಿಕ್ಷಣ ಕುರಿತು ಹೇಳಿರುವ ಮಾತುಗಳಿಂದಲೇ ದೇಶದ ಭವಿಷ್ಯ ರೂಪಿಸುವ ಮಕ್ಕಳಿಗೆ ಎಂತಹ ಶಿಕ್ಷಣ ಕೊಡಬೇಕು ಎಂಬುದು ತಿಳಿಯುತ್ತದೆ. ಅವರ ಮಾತು ಹೀಗಿದೆ. ``Education is the key that unlocks the Golden door to freedom". ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ದೇಶದ ಮುಂದಿನ ಸಂಪನ್ಮೂಲವನ್ನು ಸಿದ್ಧ ಮಾಡುವ ಶಾಲೆಗಳು ನಿಜವಾದ ದೇವಾಲಯಗಳೆಂದರೆ ತಪ್ಪಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವ ಬಹುಮಟ್ಟಿನ ಶಾಲೆಗಳಿಗೆ ಮೂಲಭೂತ ಸೌಕರ್ಯದ ಅಭಾವವಿದೆ. ಮಕ್ಕಳಿಗೆ ಉತ್ತಮ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯಿಲ್ಲದ ಅನೇಕ ಶಾಲೆಗಳಿವೆ. ಇಲ್ಲಿ ವ್ಯಾಸಂಗ ಮಾಡುವ ಹೆಣ್ಣು ಮಕ್ಕಳ ಸ್ಥಿತಿ ಹೇಗಿರಬೇಕು. ಶಾಲಾ ಕೊಠಡಿಗಳು ರಿಪೇರಿ ಕಂಡು ವರ್ಷಗಳೇ ಕಳೆದಿವೆ. ಇಂತಹ ಶಾಲೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಶಾಲಾಜೀವನ ಹರ್ಷದಾಯಕವಾಗಿರಲು ಸಾಧ್ಯವೇ? ಅವರಿಗೆ ಶಾಲೆಯ ವಿಚಾರದಲ್ಲಿ ಸದಭಿಪ್ರಾಯ ಬರಲು ಹೇಗೆ ಸಾಧ್ಯ?

ಬೆಳೆಯುತ್ತಿರುವ ಜ್ಞಾನದ ಜೊತೆ ಈ ಮಕ್ಕಳು ಹೆಜ್ಜೆ ಹಾಕಬೇಕಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲಿಷ್ ಮತ್ತು ಗಣಿತದ ವಿಚಾರದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಎನ್ನುವ ರೀತಿಯಲ್ಲಿ ನಪಾಸಾಗುತ್ತಿದ್ದಾರೆ. ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಪ್ರತಿ ಜಿಲ್ಲೆಯಲ್ಲೂ 'ಡಯಟ್' ಕೇಂದ್ರಗಳಿವೆ. (DISTRICT INSTITUTE OF EDUCATION & TRAINING) ಇವುಗಳ ಮೂಲಕ ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಅಧ್ಯಾಪಕರಿಗೆ ಅಲ್ಪಾವಧಿಯ ತರಬೇತಿ ಕೊಡಿಸುವುದು ಕಡ್ಡಾಯವಾಗಬೇಕು. ಶಿಕ್ಷಣದಲ್ಲಿ ಇದೊಂದು ಪುನರ್ ಮನನ ಮಾಡುವ ಕಾರ್ಯಕ್ರಮ. ಶಿಕ್ಷಣ ಕ್ಷೇತ್ರದ ಪ್ರಮುಖ ರೂವಾರಿ ಶಿಕ್ಷಕ. ಅವನಲ್ಲಿ ಕೌಶಲ್ಯವನ್ನು ಹೆಚ್ಚಿಸಿದಷ್ಟು ಮಕ್ಕಳಿಗೆ ತುಂಬಾ ಅನುಕೂಲ.

ಸಂತೋಷದ ಸಂಗತಿಯೆಂದರೆ ಇಂದು ಅಧ್ಯಾಪಕ ವೃತ್ತಿಗೆ ತುಂಬ ಪ್ರತಿಭಾವಂತ ಯುವಕ, ಯುವತಿಯರು ಬರುತ್ತಿದ್ದಾರೆ. ರಾಜ್ಯದಲ್ಲಿ ಮೂರು ದಶಕಗಳಿಂದಲೂ ಅಧ್ಯಾಪಕ ವೃತ್ತಿಯ ಆಯ್ಕೆ ಪ್ರತಿಭೆಯ ಮೇಲೆ ನಡೆಯುತ್ತಿರುವುದರಿಂದ ಶಿಕ್ಷಕರ ಶೈಕ್ಷಣಿಕ ಅರ್ಹತೆ ಮತ್ತು ಪ್ರತಿಭೆಯ ವಿಚಾರದಲ್ಲಿ ಯಾವುದೇ ತಕರಾರು ಇಲ್ಲ.

ಶಾಲಾ ಶಿಕ್ಷಣದಲ್ಲಿರುವ ಅಧ್ಯಾಪಕರಲ್ಲಿ ನನ್ನ ಮನವಿಯಿದೆ. ತಾವು ಈ ವೃತ್ತಿಗೆ ಬಂದ ಮೇಲೆ ಅದನ್ನು ಮನಸಾರೆ ಪ್ರೀತಿಸಿ. ತಮ್ಮ ಸುಪರ್ದಿಗೆ ಹದ ಮಾಡಿದ ಮಣ್ಣಿನ ಮುದ್ದೆಯಂತಿರುವ ಮಕ್ಕಳನ್ನು ಅವರ ತಂದೆ,ತಾಯಿಗಳು ನೀಡುತ್ತಿದ್ದಾರೆ. ಅದನ್ನು ಸುಂದರಮೂರ್ತಿಗಳನ್ನಾಗಿ ಮಾಡಿ ಸಮಾಜಕ್ಕೆ ನೀಡುವ ಜವಾಬ್ದಾರಿ ನಿಮ್ಮದು. ಬೇರೆ ವೃತ್ತಿಯಲ್ಲಿರುವವರು ನಿರ್ಲಕ್ಷ್ಯ ತೋರಿದರೆ ಆಗುವ ನಷ್ಟಕ್ಕಿಂತ ನೀವು ನಿರ್ಲಕ್ಷ್ಯ ತೋರಿದರೆ ಆಗುವ ನಷ್ಟ ತುಂಬಾ ದೊಡ್ಡದು. ಅದನ್ನು ಸರಿಪಡಿಸಲು ಸಾಧ್ಯವೇ ಆಗುವುದಿಲ್ಲ. ಸಮಾಜೋಪಯೋಗಿ ಆಗಬೇಕಾದ ಮಕ್ಕಳು ಅನುಪಯುಕ್ತರಾದರೆ ಅದರಿಂದ ದೇಶಕ್ಕೆ ಎಂತಹ ನಷ್ಟ ಎಂಬುದನ್ನು ನೀವೇ ಊಹಿಸಿ. ತಮ್ಮ ಸೇವಾವಧಿಯಲ್ಲಿ ಎಷ್ಟು ಮಕ್ಕಳ ಬಾಳಿಗೆ ಬೆಳಕು ನೀಡಿದಿರಿ ಎಂಬುದರ ಮೇಲೆ ನಿಮ್ಮ ಯಶಸ್ಸು ನಿಂತಿರುತ್ತದೆ. ನೀವು ಪರಿಪೂರ್ಣ ನಾಗರಿಕರನ್ನು ಸಮಾಜಕ್ಕೆ ನೀಡಿದರೆ ಅದಕ್ಕಿಂತ ದೊಡ್ಡ ರಾಷ್ಟ್ರಸೇವೆ ಯಾವುದಿದೆ? ಈ ಸಂದರ್ಭದಲ್ಲಿ ವಿಜಯಪುರದ ಜ್ಞಾನಯೋಗ ಆಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಸ್ವಾಮಿಗಳು ಹೇಳಿದ ಮಾತನ್ನು ತಮ್ಮಗಳ ನೆನಪಿಗೆ ತರಬಯಸುತ್ತೇನೆ. "ಭೂಮಿ ಬಿಡಿಸಿ ಆಕಾಶದೆತ್ತರಕ್ಕೇರಿಸುವವರು ಆಚಾರ್ಯರು. ಬದುಕಿನಲ್ಲಿ ಅಮೃತಭಾವ ತುಂಬವವರು ಆಚಾರ್ಯರು". ಪ್ರತಿಯೊಬ್ಬ ಶಿಕ್ಷಕನೂ ತನ್ನ ಕರ್ತವ್ಯನಿಷ್ಠೆಯಿಂದ ಶಿಕ್ಷಕ ಸ್ಥಾನದಿಂದ ಆಚಾರ್ಯಸ್ಥಾನಕ್ಕೇರಿದಾಗ ಅದರ ಪ್ರಯೋಜನ ಖಂಡಿತ ಅವರ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಇಂತಹ ಆಚಾರ್ಯರ ಸಂಖ್ಯೆ ವೃದ್ಧಿಸಲಿ.

■ ನಿರೂಪಣೆ: ಎನ್.ಭಾರತಿ

## ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಲ್ಲಿ ಉದ್ಯೋಗಾವಕಾಶ

"ತಾಂತ್ರಿಕ ಶಿಕ್ಷಣದಲ್ಲಿರುವ ವಿದ್ಯಾರ್ಥಿಗಳು ಪಠ್ಯಕ್ರಮದೊಂದಿಗೆ ಉದ್ಯೋಗಕ್ಕೆ ಅನುಕೂಲವಾಗುವ ಕೌಶಲ್ಯವನ್ನು ಕಲಿಯಬೇಕು. ವಿದ್ಯಾರ್ಥಿಗಳಲ್ಲಿ ಉತ್ತಮ ಫಲಿತಾಂಶ ಪಡೆದವರು ಈ ಕೌಶಲ್ಯವನ್ನು ರೂಢಿಸಿಕೊಂಡರೆ ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ. ಅಧ್ಯಯನ ಸಂದರ್ಭದಲ್ಲಿ ಸಮಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದರೆ ಗುರಿಮುಟ್ಟಲೂ ಸಾಧ್ಯವಾಗುತ್ತದೆ" ಎಂದು ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್‌ರವರು ತಿಳಿಸಿದರು.

ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನ ವತಿಯಿಂದ ಉದ್ಯೋಗಾವಕಾಶಕ್ಕೆ ಆಯ್ಕೆಯಾದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮೇ.23 ರಂದು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಾಗಾರದಲ್ಲಿ ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಎಸ್.ಲೋಕೇಶ್‌ರವರು ಮಾತನಾಡುತ್ತಾ "ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಬೇಕಾಗಿರುವ ಕೌಶಲ್ಯಾಭಿವೃದ್ಧಿಗೆ ಈ ಕಾರ್ಯಾಗಾರ ಸಹಾಯವಾಗುತ್ತದೆ. ಇದರ ಮೂಲಕ ಉದ್ಯೋಗಾವಕಾಶಗಳ ಮಾಹಿತಿಯನ್ನು ವಿದ್ಯಾರ್ಥಿಗಳು ಪಡೆದು ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕು" ಎಂದರು. ಶ್ರೀದೇವಿ ಎಂ.ಬಿ.ಎ ಕಾಲೇಜಿನ ಉಪನ್ಯಾಸಕರಾದ ಪ್ರೊ.ಟಿ.ಎಂ.ಪ್ರವೀಣ್‌ಕುಮಾರ್ ಅವರು "ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಅವರಲ್ಲಿ ಆತ್ಮವಿಶ್ವಾಸ, ಕೌಶಲ್ಯ, ಶ್ರದ್ಧೆ, ಸಮಯಪ್ರಜ್ಞೆ ಅತ್ಯವಶ್ಯಕವಾಗಿದೆ. ಡಿಪ್ಲೊಮಾ ಕೋರ್ಸ್ ಮುಗಿದ ನಂತರ ಯಾವ ರೀತಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ದೊರೆಯುತ್ತದೆ" ಎನ್ನುವುದನ್ನು ವಿಸ್ತಾರವಾಗಿ ವಿವರಿಸಿದರು.

## ಶ್ರದ್ಧಾಂಜಲಿ

ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ತುಪ್ಪದಕುರಹಟ್ಟಿಯಲ್ಲಿ ಜನಿಸಿ ತುಮಕೂರಿನ ಹೆಚ್.ಎಂ.ಟಿ.ಕಾರ್ಖಾನೆಯಲ್ಲಿ ಕರ್ತವ್ಯ



ನಿರ್ವಹಿಸಿ, ಸ್ವಯಂನಿವೃತ್ತಿ ಪಡೆದು ಊರಿನಲ್ಲಿದ್ದ ಶ್ರೀ ಬಸಪ್ಪ ರಂಗಪ್ಪ ಹುಲಿನಾಯ್ಕರ್ (ಜನನ 15.5.1957) ಅವರು 6.6.2023ರಂದು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ನಿಧನರಾದರು. ಶ್ರೀ ಬಸಪ್ಪ ಆರ್. ಹುಲಿನಾಯ್ಕರ್ ಅವರು ಮಡದಿ ಶ್ರೀಮತಿ ಸಾವಿತ್ರಮ್ಮ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶ್ರೀಯುತರು ಡಾ.ಎಂ.ಆರ್.ಹುಲಿನಾಯ್ಕರ್ ಅವರ ಕಿರಿಯ ಸೋದರರು. ಅವರ ಅಂತ್ಯಸಂಸ್ಕಾರ ತುಪ್ಪದಕುರಹಟ್ಟಿಯಲ್ಲಿ ಅಪಾರ ಬಂಧುಮಿತ್ರರ ಸಮ್ಮುಖದಲ್ಲಿ ಜರುಗಿತು. ಮೃತರ ಆತ್ಮಕ್ಕೆ ಶಾಂತಿ ಕೋರಲಾಗಿದೆ.

**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ವಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ಅಂತರ್ಜಾಲ, ಮಾಹಿತಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರ



■ ಡಾ.ಎಚ್.ಎ.ದಿನೇಶ್
ಪ್ರಾಧ್ಯಾಪಕರು, ಗಣಕಯಂತ್ರ ವಿಭಾಗ
sridini@gmail.com
ಮೊ.7767076988




ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರದಲ್ಲಿ ಡಾ. ದಿನೇಶ್ ಹೆಚ್.ಎ., ಡಾ. ಸೌಮ್ಯ ಕೆ. ಘೋಷ್, ಶ್ರೀ ಎಂ. ಎಸ್. ಪಾಟೀಲ್, ಡಾ. ರಾಜಕುಮಾರ್ ಬುಯ್ಯ, ಡಾ. ಸತೀಶ್ ನಾರಾಯಣ ಶ್ರೀರಾಮ್, ಡಾ. ಎಂ. ಆರ್. ಹುಲಿನಾಯ್ಕರ್, ಡಾ. ಮಹೇಶ್ವರ್, ಡಾ. ರಮಣ್ ಹುಲಿನಾಯ್ಕರ್, ಡಾ. ನರೇಂದ್ರ ವಿಸ್ವನಾಥ್, ಡಾ. ಚಂದ್ರಶೇಖರ್, ಡಾ. ಮಂಜುಳ ಉಪಸ್ಥಿತರಿದ್ದರು.

### ಹಿನ್ನೆಲೆ

ತುಮಕೂರಿನ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆಯಲ್ಲಿ International Conference on Internet of things, Communications, Intelligence and Computing ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರ 5 ಮತ್ತು 6ನೇ ಮೇ 2023 ರಂದು ನಡೆಯಿತು.

ಈ ಸಮ್ಮೇಳನ Embedded Computing, VLSI, Communication, Image processing, Cyber Security, Forensic and Defence Intelligence, Data Science ಮತ್ತು Artificial intelligenceಗಳನ್ನೊಳಗೊಂಡಿತ್ತು. ಈ ತಂತ್ರಜ್ಞಾನಗಳನ್ನು ವಿಶ್ಲೇಷಿಸಿದ ಸಂಶೋಧನಾ ಲೇಖನಗಳನ್ನು ತಜ್ಞರು ಮಂಡಿಸಿದರು. ಅದನ್ನು ಅದೇ ಕ್ಷೇತ್ರದ ತಜ್ಞರು ಮೌಲ್ಯಮಾಪನ ಮಾಡಿದರು.

ಅಂತಾರಾಷ್ಟ್ರೀಯ ಕಾರ್ಯಾಗಾರವು 'ಕ್ಲೌಡ್ ಮತ್ತು ಗ್ರೀಡ್' (Cloud and Grid) ವಿಷಯದ ಮೇಲೆ ಕೇಂದ್ರೀಕರಿಸಿತ್ತು. ಇದು ANEKA ತಂತ್ರಾಂಶ Cloud Platform Demo ಸಂಬಂಧಿತ ತಂತ್ರಜ್ಞಾನಗಳನ್ನೊಳಗೊಂಡಿದೆ. ಸಮ್ಮೇಳನ ಮತ್ತು ಕಾರ್ಯಾಗಾರ ಎರಡು ಕಾರ್ಯಕ್ರಮಗಳು ಶ್ರೀದೇವಿ ತಾಂತ್ರಿಕ ಕಾಲೇಜಿನ ಆವರಣದಲ್ಲಿ ನಡೆಯಿತು.

### ಅಂತಾರಾಷ್ಟ್ರೀಯ ಖ್ಯಾತಿಯ ಕರ್ನಾಟಕದ ಕಂಪ್ಯೂಟರ್ ವಿಜ್ಞಾನಿ

ಅನಿವಾಸಿ ಭಾರತೀಯರಾದ ಡಾ. ರಾಜ್‌ಕುಮಾರ್ ಬುಯ್ಯ ಅವರು ಆಸ್ಟ್ರೇಲಿಯಾದ ಪ್ರತಿಷ್ಠಿತ ಮೆಲ್ಬೋರ್ನ್ (Melbourne) ವಿಶ್ವವಿದ್ಯಾನಿಲಯದ ಕ್ಲೌಡ್ ಕಂಪ್ಯೂಟಿಂಗ್ (Cloud Computing) ಮತ್ತು ಡಿಸ್ಟ್ರಿಬ್ಯೂಟೆಡ್ ಸಿಸ್ಟಮ್ಸ್ (Distributed Systems) ಲ್ಯಾಬೋರೇಟರಿಯ ರೆಡ್‌ಮಂಡ್ ಬ್ಯಾರಿ ಪ್ರಾಧ್ಯಾಪಕ ಮತ್ತು ನಿರ್ದೇಶಕರಾಗಿದ್ದಾರೆ. ಅವರು ಮೂಲತಃ ಕರ್ನಾಟಕದ ಬೀದರ್ ಜಿಲ್ಲೆಯವರು. ಡಾ.ಬುಯ್ಯ ಅವರು ವಿಶ್ವವಿದ್ಯಾನಿಲಯದ ಸ್ಪಿನ್–ಆಫ್ ಕಂಪನಿಯಾದ ಮಂಜ್ರಾಸಾಫ್ಟ್‌ನ ಸ್ಥಾಪಕ ಸಿ.ಇ.ಓ. ಆಗಿ ಸಹ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿನ ಆವಿಷ್ಕಾರಗಳನ್ನು ವಾಣಿಜ್ಯೀಕರಿಸಿದ್ದಾರೆ.

ಶ್ರೀಯುತರು ಮ್ಯಾಕ್‌ಗ್ರಾ ಹಿಲ್ (McGraw Hill), ಚೈನಾ ಮೆಷಿನ್ ಪ್ರೆಸ್ (China Machine Press) ಮತ್ತು ಮೋರ್ಗನ್ ಕೌಫ್‌ಮನ್ ಅವರಿಂದ (Morgan Coughman) ಅನುಕ್ರಮವಾಗಿ ಭಾರತ, ಚೀನಾ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಕಟವಾದ "ಮಾಸ್ಟರಿಂಗ್ ಕ್ಲೌಡ್ ಕಂಪ್ಯೂಟಿಂಗ್" ಸೇರಿದಂತೆ 850 ಕ್ಕೂ ಹೆಚ್ಚು ಸಂಶೋಧನಾ ಲೇಖನ ಮತ್ತು ಏಳು ಪಠ್ಯಪುಸ್ತಕಗಳನ್ನು ಪ್ರಕಟಿಸಿದ್ದಾರೆ. ವಿಶ್ವಾದ್ಯಂತ ಕಂಪ್ಯೂಟರ್ ವಿಜ್ಞಾನ ಮತ್ತು ಸಾಫ್ಟ್‌ವೇರ್ ಇಂಜಿನಿಯರಿಂಗ್‌ನಲ್ಲಿ ಹೆಚ್ಚು ಉಲ್ಲೇಖಿತ ಲೇಖಕರಲ್ಲಿ ಡಾ. ರಾಜಕುಮಾರ ಬುಯ್ಯ ಒಬ್ಬರು. ಸಂಶೋಧನಾ ಲೇಖನಗಳಿಗಾಗಿ ವಿಶ್ವದ ಅತ್ಯುನ್ನತ–ಇಂಡೆಕ್ಸ್–160, ಜಿ–ಇಂಡೆಕ್ಸ್–350, ಮತ್ತು 1,37,128/–ರ ಗೂಗಲ್ ಉಲ್ಲೇಖವನ್ನು ಪಡೆದ ಖ್ಯಾತಿ ಅವರದು. ಡಾ.ಬುಯ್ಯ ಅವರ ನಾಯಕತ್ವದಲ್ಲಿ ಅಭಿವೃದ್ಧಿಪಡಿಸಲಾದ ಗ್ರಿಡ್, ಕ್ಲೌಡ್ ಮತ್ತು ಫಾಗ್ ಕಂಪ್ಯೂಟಿಂಗ್‌ನ ಸಾಫ್ಟ್‌ವೇರ್ ತಂತ್ರಜ್ಞಾನಗಳು ಕ್ಷಿಪ್ರ ಸ್ವೀಕಾರವನ್ನು ಪಡೆದುಕೊಂಡಿವೆ. ಪ್ರಪಂಚದಾದ್ಯಂತ ಐವತ್ತಕ್ಕೂ ಹೆಚ್ಚಿನ ದೇಶಗಳಲ್ಲಿನ ಅನೇಕ ಶೈಕ್ಷಣಿಕ ಸಂಸ್ಥೆ ಮತ್ತು ವಾಣಿಜ್ಯ ಉದ್ಯಮದಲ್ಲಿ ಈ ತಂತ್ರಜ್ಞಾನ ಬಳಕೆಯಲ್ಲಿದೆ. ಅವರ ನಾಯಕತ್ವದಲ್ಲಿ ಅಭಿವೃದ್ಧಿಪಡಿಸಿದ ಮಂಜ್ರಾಸಾಫ್ಟ್‌ನ (Manjrasoft) ಕ್ಲೌಡ್ ತಂತ್ರಜ್ಞಾನವು "ಫಾಸ್ಟ್ ನ್ಯೂ ಪ್ರಾಡಕ್ಟ್ ಇನ್ನೋವೇಶನ್ ಅವಾರ್ಡ್' (Fast New Product Innovation award) ಅನ್ನು ಪಡೆದುಕೊಂಡಿದೆ.

ಡಾ.ಬುಯ್ಯ ಅವರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಲ್ಲಿಸಿದ ಅತ್ಯುತ್ತಮ ಮತ್ತು ಅಸಾಧಾರಣ ಸಾಧನೆಗಾಗಿ ಚಿನ್ನದ ಪದಕಗಳೊಂದಿಗೆ "ಮಹಾತ್ಮ ಗಾಂಧಿ ಪ್ರಶಸ್ತಿ" ಪಡೆದಿದ್ದಾರೆ. ಈ ಪ್ರಶಸ್ತಿ ಭಾರತವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ನೇಹ, ಸಹಕಾರವನ್ನು ಉತ್ತೇಜಿಸಲು ಸಹಕಾರಿಯಾಗಿದೆ. ಅವರು ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿ ಐ.ಇ.ಇ.ಇ.ನ (IEEE) ಟ್ರಾನ್ಸಾಕ್ಷನ್ಸ್‌ನ ಸಂಸ್ಥಾಪಕ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಪ್ರಸ್ತುತ ಸಾಫ್ಟ್‌ವೇರ್‌ನ ಮುಖ್ಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಭ್ಯಾಸ ಮತ್ತು ಅನುಭವಗಳಿಂದಾಗಿ ಐವತ್ತು ವರ್ಷಗಳಷ್ಟು ಹಳೆಯದಾದ ಕ್ಷೇತ್ರದಲ್ಲಿ ಜರ್ನಲ್ ಜೊತೆ ಅವರಿಗೆ ದೀರ್ಘಕಾಲದಿಂದಲೂ ಸಂಪರ್ಕವಿದೆ.

ಅವರು ಏಷ್ಯಾ, ಆಸ್ಟ್ರೇಲಿಯಾ, ಯುರೋಪ್, ಉತ್ತರ ಅಮೆರಿಕಾ ಮತ್ತು ದಕ್ಷಿಣ ಅಮೆರಿಕಾದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಆಹ್ವಾನಿತರಾಗಿದ್ದಾರೆ. ವಿಶ್ವದ ಪ್ರಮುಖ ಸಂಸ್ಥೆಗಳಲ್ಲಿ 'ಐಟಿ ಫ್ಯೂಚರ್ಸ್,' 'ಅಡ್ವಾನ್ಸ್ ಕಂಪ್ಯೂಟಿಂಗ್ ತಂತ್ರಜ್ಞಾನ' ಮತ್ತು 'ಆಧ್ಯಾತ್ಮಿಕ ವಿಜ್ಞಾನ' ಕುರಿತು ಏಳುನೂರಕ್ಕೂ ಹೆಚ್ಚು ಸಂವಾದ–ಉಪನ್ಯಾಸಗಳಲ್ಲಿ ಭಾಗವಹಿಸಿದ್ದಾರೆ. ಡಾ.ರಾಜಕುಮಾರ ಬುಯ್ಯ ಅವರನ್ನು ಇತ್ತೀಚೆಗೆ 'ಯುರೋಪ್ ಅಕಾಡೆಮಿಯ ಫೆಲೋ' (Europe Fellow) ಆಗಿ ಗುರುತಿಸಲಾಗಿದೆ.

### ಐಐಟಿ ಪ್ರತಿಭೆ

ಡಾ.ಸೌಮ್ಯಕಾಂತಿ ಘೋಷ್ ಅವರು ಖರಗ್‌ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (Indian Institute of Technology) ಕಂಪ್ಯೂಟರ್‌ಸೈನ್ಸ್ (Computer Sciece and Engineering) ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಡಾ. ಸೌಮ್ಯಕಾಂತಿ ಘೋಷ್ ಅವರ ಸಂಶೋಧನಾ ಕ್ಷೇತ್ರದ ವ್ಯಾಪ್ತಿಯು 'ಜಿಯೋಸ್ಪೇಷಿಯಲ್ ಡೇಟಾಬೇಸ್ ಮತ್ತು ಅದರ ಸೇವೆ, ಕ್ಲೌಡ್ ಕಂಪ್ಯೂಟಿಂಗ್ ಹಾಗೂ ಭದ್ರತೆ'ಯನ್ನೊಳಗೊಂಡಿದೆ. ಖರಗ್‌ಪುರದ ಐಐಟಿಗೆ ಬರುವ ಮೊದಲು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ (ಇಸ್ರೋ) 'ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ರಿಮೋಟ್ ಸೆನ್ಸಿಂಗ್ (Remote Sensing) ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ' ವಿಭಾಗದಲ್ಲಿ ಕೆಲಸ ಮಾಡಿದ್ದಾರೆ.

ಡಾ. ಸೌಮ್ಯಕಾಂತಿ ಘೋಷ್ ಅವರು ಐಐಟಿ ಖರಗ್‌ಪುರದ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ (Computer Science and Engineering) ವಿಭಾಗದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂ.ಟೆಕ್. ಮತ್ತು ಪಿ.ಎಚ್‌ಡಿ. ಪದವಿಗಳನ್ನು ಪಡೆದಿದ್ದಾರೆ. ಅದಕ್ಕೆ ಪೂರ್ವದಲ್ಲಿ ದುರ್ಗಾಪುರದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಬಿ.ಇ.ಪದವಿ ಪಡೆದಿದ್ದರು.

### ಮುಖ್ಯ ಅತಿಥಿ

ಹೈದ್ರಾಬಾದ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ಡಾ.ಸತೀಶ್ ಶ್ರೀರಾಮ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮುಖ್ಯ ಭಾಷಣ ಮಾಡಿದರು.

ಈ ಸಮ್ಮೇಳನದಲ್ಲಿ ಮಂಡಿತವಾದ ಸಂಶೋಧನಾ ಪ್ರಬಂಧಗಳನ್ನು ಗುಣಮಟ್ಟಕ್ಕಾಗಿ ಪ್ರಪಂಚದಾದ್ಯಂತವಿರುವ ಕಂಪ್ಯೂಟರ್ ತಜ್ಞರು ಪರಿಶೀಲನೆ ನಡೆಸಿದರು. ಮುಂದಿನ ದಿನಗಳಲ್ಲಿ ಮಾನ್ಯತೆ ಪಡೆದ ಸಂಶೋಧನಾ ಲೇಖನಗಳನ್ನು ನಿಯತಕಾಲಿಕಗಳಲ್ಲಿ ಪ್ರಕಟಿಸಲಾಗುತ್ತದೆ.

ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿನ ಸುಧಾರಿತ ತಂತ್ರಜ್ಞಾನ, ನಾವೀನ್ಯತೆ, ಆವಿಷ್ಕಾರ, ಹೊಸ ಸಂಶೋಧನೆ ಮತ್ತು ಪ್ರವೃತ್ತಿಯನ್ನು ತಿಳಿಯಲು ಮತ್ತು ಅಧ್ಯಯನ ಮಾಡಲು ಈ ಅಂತಾರಾಷ್ಟ್ರೀಯ ವೇದಿಕೆ ಪ್ರೇರಣೆ ನೀಡಿತ್ತು. ಪ್ರಪಂಚದಾದ್ಯಂತ ಅನೇಕ ಶಿಕ್ಷಣತಜ್ಞರು, ಸಂಶೋಧಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಈ ವೇದಿಕೆಯನ್ನು ಆಫ್‌ಲೈನ್ ಮತ್ತು ಆನ್‌ಲೈನ್ ಮಾದರಿಯಲ್ಲಿ ಬಳಸಿಕೊಂಡಿದ್ದಾರೆ. ಸಂಪೂರ್ಣ ಕಾರ್ಯಕ್ರಮವು ವ್ಯಾಕ್ಸಿಂಗ್‌ನಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಮಾಡಲಾಗಿದೆ. ಅಮೆರಿಕಾ, ಆಸ್ಟ್ರೇಲಿಯಾ, ಸ್ಪೇನ್, ಮಲೇಷಿಯಾ, ಪೆರು, ಡೆನ್‌ಮಾರ್ಕ್ ಮತ್ತು ಬಾಂಗ್ಲಾದೇಶ ಮುಂತಾದ ಪ್ರಮುಖ ರಾಷ್ಟ್ರಗಳು ಇದರಲ್ಲಿ ಭಾಗವಹಿಸಿದ್ದವು. ಈ ವೇದಿಕೆಯಲ್ಲಿ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಲೇಖಕರು ಇನ್ನೂರ ಒಂಬತ್ತು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಸುಮಾರು ಮೂರು ನೂರಕ್ಕೂ ಹೆಚ್ಚು ಸಂಶೋಧನಾರ್ಥಿಗಳು ಕಾರ್ಯಾಗಾರಗಳಿಗೆ ಹಾಜರಾಗಿದ್ದಾರೆ. ಪ್ರಪಂಚದಾದ್ಯಂತವಿರುವ ಅನೇಕ ಸಂಶೋಧಕರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು ಮತ್ತು ಅಧ್ಯಾಪಕರನ್ನು ಈ ಕಾರ್ಯಗಾರ ಮತ್ತು ಸಮ್ಮೇಳನ ಆಕರ್ಷಿಸಿತು. ಕೆಳಕಂಡ ವಿಷಯಗಳ ಬಗ್ಗೆ ಆಳವಾದ ಅಧ್ಯಯನವುಳ್ಳ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಾಯಿತು.

### ಸೈಬರ್ ಸೆಕ್ಯೂರಿಟಿ (Cyber security)

ಈಗಿನ ದಿನಗಳಲ್ಲಿ ಎಲ್ಲಾ ಕೆಲಸಗಳು ಇಂಟರ್‌ನೆಟ್ ಅಥವಾ ಅಂತರ್ಜಾಲದಲ್ಲಿ (Internet) ನಡೆಯುತ್ತಿವೆ. ಅಲ್ಲಿನ ವಿವರಗಳನ್ನು 'ಡೇಟಾ' (Data) ಎಂದರೆ ಮಾಹಿತಿ (Information) ಎನ್ನುತ್ತಾರೆ. ಇದನ್ನು ಯಾರೂ ಕದಿಯದಂತೆ ನೋಡಿಕೊಳ್ಳಲು ಮತ್ತು ಕಂಪ್ಯೂಟರ್‌ನಲ್ಲಿರುವ ಮಾಹಿತಿ ಸೋರಿಕೆಯಾಗದಂತೆ ತಡೆಗಟ್ಟಲು ಈ ಸೈಬರ್ ಸೆಕ್ಯೂರಿಟಿ(Cyber Security) ಎನ್ನುವ ವೃತ್ತಿಪರರ ಅವಶ್ಯಕತೆ ತುಂಬಾ ಇದೆ. ಅದರಲ್ಲೂ ಡೇಟಾ ತಂತ್ರಜ್ಞಾನ, ಡಿಜಿಟಲೀಕರಣ ಮತ್ತು ಡೇಟಾ ಸೇರ್ಪಡೆಯ ವಿಷಯದಲ್ಲಿ ಭಾರತವು ಇಡೀ ಜಗತ್ತಿನಲ್ಲೇ ಉನ್ನತ ಸ್ಥಾನದಲ್ಲಿದೆ. ಇದನ್ನೆಲ್ಲಾ ಜೋಪಾನ ಮಾಡಿಕೊಳ್ಳಲು ಸೈಬರ್ ಸೆಕ್ಯೂರಿಟಿಯ ವೃತ್ತಿಪರರು ಎಲ್ಲಾ ಕ್ಷೇತ್ರಗಳಿಗೂ ಬೇಕಾಗಿದ್ದಾರೆ. ಜಾಗತಿಕ ಯೂನಿಕಾರ್ನ್ ಆಗಲು (unicorn) 'ಸ್ಟಾರ್ಟ್ ಅಪ್ ಇಂಡಿಯಾ,' 'ಡಿಜಿಟಲ್ ಇಂಡಿಯಾ' ಮುಂತಾದ ಪ್ರಮುಖ ತಂತ್ರಜ್ಞಾನ ಆಧಾರಿತ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವೇ ಚಾಲನೆ ನೀಡಿದೆ.

ಕಂಪ್ಯೂಟರ್‌ನ ಸರ್ವರ್ (Server), ಮೊಬೈಲ್‌ಧನಗಳು, ಎಲೆಕ್ಟ್ರಾನಿಕ್ ಸಿಸ್ಟಂಗಳು, ನೆಟ್‌ವರ್ಕ್ ಮತ್ತು ಡೇಟಾವನ್ನು ದುರುದ್ದೇಶಪೂರಿತ ದಾಳಿಯಿಂದ ಸಂರಕ್ಷಿಸುವುದಕ್ಕೆ ಸೈಬರ್ ಭದ್ರತೆ ಅಥವಾ ಮಾಹಿತಿ ತಂತ್ರಜ್ಞಾನ ಭದ್ರತೆ ಅಥವಾ ಎಲೆಕ್ಟ್ರಾನಿಕ್‌ನ ಭದ್ರತೆ ಎಂದು ಸಹ ಕರೆಯುತ್ತಾರೆ. ಇದು ಮೊಬೈಲ್ ಕಂಪ್ಯೂಟಿಂಗ್‌ಗೂ ವಿವಿಧ ಸಂದರ್ಭಗಳಲ್ಲಿ ಅನ್ವಯಿಸುತ್ತದೆ. ಇದನ್ನು ಕೆಲವು ಸಾಮಾನ್ಯ ವರ್ಗಗಳಾಗಿ ವಿಂಗಡಿಸಬಹುದು.

- **ನೆಟ್‌ವರ್ಕ ಭದ್ರತೆ** ಆಕ್ರಮಣಕಾರರು ಅಥವಾ ಅವಕಾಶವಾದಿಗಳು ಯಾವುದೇ ಮಾರ್ಗದಿಂದ ಕಂಪ್ಯೂಟರ್‌ನ ಒಳಗೆ ನುಗ್ಗುವವರಿಂದ ಕಂಪ್ಯೂಟರ್‌ನ ನೆಟ್‌ವರ್ಕ್ ಅನ್ನು ಸುರಕ್ಷಿತಗೊಳಿಸಿಕೊಳ್ಳಬೇಕಾಗಿದೆ.

- **ಅಪ್ಲಿಕೇಶನ್ ಭದ್ರತೆ**ಯು ಸಾಫ್ಟ್‌ವೇರ್ ಮತ್ತು ಸಾಧನಗಳನ್ನು ಬೆದರಿಕೆಗಳಿಂದ ಮುಕ್ತವಾಗಿಡುವುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ. ರಾಜಿ ಮಾಡಿಕೊಂಡ ಅಪ್ಲಿಕೇಶನ್ ರಕ್ಷಿಸಲು ವಿನ್ಯಾಸಗೊಳಿಸಿದ ಡೇಟಾಗೆ ಪ್ರವೇಶವನ್ನು ಒದಗಿಸಬಹುದು. ಒಂದು ಪ್ರೋಗ್ರಾಂ (Program) ಅಥವಾ ಸಾಧನವನ್ನು ನಿಯೋಜಿಸುವ ಮೊದಲು, ಯಶಸ್ವಿ ಭದ್ರತೆಯು ವಿನ್ಯಾಸದ ಹಂತದಲ್ಲಿ ಪ್ರಾರಂಭವಾಗುತ್ತದೆ.
- ಮಾಹಿತಿ ಸುರಕ್ಷತೆಯು ಶೇಖರಣೆಯಲ್ಲಿ ಮತ್ತು ಸಾಗಣೆಯಲ್ಲಿ ಡೇಟಾದ ಸಮಗ್ರತೆ ಮತ್ತು ಗೌಪ್ಯತೆಯನ್ನು ರಕ್ಷಿಸುತ್ತದೆ.
- **ಕಾರ್ಯಾಚರಣೆ ಭದ್ರತೆ**ಯು ಡೇಟಾ ಸ್ವತ್ತುಗಳನ್ನು ನಿರ್ವಹಿಸುವ ಹಾಗೂ ರಕ್ಷಿಸುವ ಪ್ರಕ್ರಿಯೆ ಮತ್ತು ನಿರ್ಧಾರಗಳನ್ನು ಒಳಗೊಂಡಿದೆ. ನೆಟ್‌ವರ್ಕ್ ಅನ್ನು ಪ್ರವೇಶಿಸುವಾಗ ಬಳಕೆದಾರರು ಹೊಂದಿರುವ ಅನುಮತಿ ಮತ್ತು ಡೇಟಾವನ್ನು ಹೇಗೆ ಹಾಗೂ ಎಲ್ಲಿ ಸಂಗ್ರಹಿಸಬಹುದು ಅಥವಾ ಹಂಚಿಕೊಳ್ಳಬಹುದು ಎಂಬುದನ್ನು ನಿರ್ಧರಿಸುವ ಕಾರ್ಯವಿಧಾನಗಳು ಇದರ ಅಡಿಯಲ್ಲಿ ಬರುತ್ತವೆ.
- **ವಿಪತ್ತು ಚೇತರಿಕೆ ಮತ್ತು ವ್ಯವಹಾರದ ನಿರಂತರತೆ**ಯು ಸೈಬರ್-ಸುರಕ್ಷತಾ ಘಟನೆ ಅಥವಾ ಕಾರ್ಯಾಚರಣೆ ಅಥವಾ ಡೇಟಾದ ನಷ್ಟವನ್ನು ಉಂಟುಮಾಡುವ ಯಾವುದೇ ಘಟನೆಗೆ ಸಂಸ್ಥೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ವ್ಯಾಖ್ಯಾನಿಸುತ್ತದೆ. ವಿಪತ್ತು ಮರುಪಡೆಯುವಿಕೆ ನೀತಿ, ಸಂಸ್ಥೆ ತನ್ನ ಕಾರ್ಯಾಚರಣೆಯನ್ನು ಹೇಗೆ ಮರುಸ್ಥಾಪಿಸುತ್ತದೆ. ಘಟನೆಯ ಮೊದಲಿನ ಅದೇ ಕಾರ್ಯಸಾಮರ್ಥ್ಯಕ್ಕೆ ಮರಳಲು ಮಾಹಿತಿಯನ್ನು ನಿರ್ದೇಶಿಸುತ್ತದೆ. ವ್ಯಾಪಾರದಲ್ಲಿ ನಿರಂತರ ಸಂಪನ್ಮೂಲಗಳಿಲ್ಲದೆ ಕಾರ್ಯನಿರ್ವಹಿಸಲು ಪ್ರಯತ್ನಿಸುತ್ತಿರುವಾಗ ಸಂಸ್ಥೆಯು ಹಿಂದೆ ಬೀಳುವ ಸಾಧ್ಯತೆಯಿರುತ್ತದೆ.
- ಅಂತಿಮ – ಬಳಕೆದಾರರ ಶಿಕ್ಷಣವು ಅತ್ಯಂತ ಪ್ರಮುಖ. ಅನಿರೀಕ್ಷಿತ ಸೈಬರ್-ಸುರಕ್ಷತಾ ಅಂಶವನ್ನು ಜನರಿಗೆ ತಿಳಿಸಬೇಕಾಗುತ್ತದೆ. ಉತ್ತಮ ಭದ್ರತಾ ಅಭ್ಯಾಸಗಳನ್ನು ಅನುಸರಿಸಲು ವಿಫಲವಾದಾಗ ಉತ್ತಮ ವ್ಯವಸ್ಥೆಗಾಗಿ ಸುರಕ್ಷಿತ ವೈರಸ್‌ನ್ನು ಪರಿಚಯಿಸಬಹುದು. ಅನುಮಾನಾಸ್ಪದ ಇ ಮೇಲ್‌ಗಳನ್ನು ಅಳಿಸಲು ಬಳಕೆದಾರರಿಗೆ ಕಲಿಸುವುದು, ಗುರುತಿಸಲಾಗದ USB Drive ಡ್ರೈವ್‌ಗಳನ್ನು Plug In ಮಾಡದಿರುವುದು ಮೊದಲಾದ ಪ್ರಮುಖ ಪಾಠಗಳು ಯಾವುದೇ ಸಂಸ್ಥೆಯ ಭದ್ರತೆಗೆ ಅತ್ಯಗತ್ಯವಾಗಿರುತ್ತದೆ.

### ಸೈಬರ್ ಬೆದರಿಕೆಯ ಪ್ರಮಾಣ

ಜಾಗತಿಕ ಸೈಬರ್ ಬೆದರಿಕೆಯು ತ್ವರಿತಗತಿಯಲ್ಲಿ ವಿಕಸನಗೊಳ್ಳುತ್ತಲೇ ಇದೆ, ಪ್ರತಿವರ್ಷ ಹೆಚ್ಚುತ್ತಿರುವ ಡೇಟಾ ಉಲ್ಲಂಘನೆಗಳೊಂದಿಗೆ. ರಿಸ್ಕ್ ಬೇಸಡ್ ಸೆಕ್ಯೂರಿಟಿಯ ವರದಿಯು 2019ರ ಮೊದಲ ಒಂಬತ್ತು ತಿಂಗಳುಗಳಲ್ಲಿ 7.9 ಶತಕೋಟಿ ದಾಖಲೆಗಳನ್ನು ಡೇಟಾ ಉಲ್ಲಂಘನೆಗಳಿಂದ ಎಂದು ಬಹಿರಂಗಪಡಿಸಿದೆ. ಈ ಅಂಕಿ ಅಂಶವು 2018ರಲ್ಲಿ ಅದೇ ಅವಧಿಯಲ್ಲಿ ಬಹಿರಂಗ ಪಡಿಸಿದ ದಾಖಲೆಗಳ ಸಂಖ್ಯೆಗಿಂತ ಎರಡು ಪಟ್ಟು ಹೆಚ್ಚು (ಶೇಕಡ 112).

ವೈದ್ಯಕೀಯ ಸೇವೆಗಳು, ಚಿಲ್ಲರೆ ವ್ಯಾಪಾರಿಗಳು ಮತ್ತು ಸಾರ್ವಜನಿಕ ಘಟಕಗಳು ಹೆಚ್ಚಿನ ಉಲ್ಲಂಘನೆಗಳನ್ನು ಅನುಭವಿಸಿವೆ, ಹೆಚ್ಚಿನ ಘಟನೆಗಳಿಗೆ ದುರುದ್ದೇಶಪೂರಿತ ಅಪರಾಧಿಗಳು ಜವಾಬ್ದಾರರಾಗಿದ್ದಾರೆ. ಈ ಕೆಲವು ವಲಯಗಳು ಸೈಬರ್ ಅಪರಾಧಿಗಳಿಗೆ ಹೆಚ್ಚು ಆಕರ್ಷಕವಾಗಿವೆ ಏಕೆಂದರೆ ಅವರು ಹಣಕಾಸು ಮತ್ತು ವೈದ್ಯಕೀಯ ಡೇಟಾವನ್ನು ಸಂಗ್ರಹಿಸುತ್ತಾರೆ, ಆದರೆ ನೆಟ್‌ವರ್ಕ್‌ಗಳನ್ನು ಬಳಸುವ ಎಲ್ಲಾ ವ್ಯವಹಾರಗಳು ಗ್ರಾಹಕರ ಡೇಟಾ, ಕಾರ್ಪೊರೇಟ್ ಬೇಹುಗಾರಿಕೆ ಅಥವಾ ಗ್ರಾಹಕರ ದಾಳಿಗೆ ಗುರಿಯಾಗಬಹುದು.

ಸೈಬರ್ ಬೆದರಿಕೆಯ ಪ್ರಮಾಣವು ಹೆಚ್ಚುತ್ತಲೇ ಇರುವುದರಿಂದ, ಸೈಬರ್ ಸೆಕ್ಯೂರಿಟಿ ಪರಿಹಾರಗಳ ಮೇಲಿನ ಜಾಗತಿಕ ಖರ್ಚು ಸ್ವಾಭಾವಿಕವಾಗಿ ಹೆಚ್ಚುತ್ತಿದೆ. 2023ರಲ್ಲಿ ಸೈಬರ್ ಸೆಕ್ಯೂರಿಟಿ ಖರ್ಚು $188.3 ಬಿಲಿಯನ್ ತಲುಪುತ್ತದೆ. 2026ರ ವೇಳೆಗೆ ಜಾಗತಿಕವಾಗಿ $260 ಶತಕೋಟಿಯನ್ನು ಮೀರುತ್ತದೆ ಎಂದು ಮಾನ್ಯ ಗಾರ್ಟರ್ (Garter) ಭವಿಷ್ಯ ನುಡಿದಿದ್ದಾರೆ. ಪರಿಣಾಮ ಕಾರಿಸೈಬರ್-ಸುರಕ್ಷತಾ ಅಭ್ಯಾಸಗಳನ್ನು ಕಾರ್ಯಗತ ಗೊಳಿಸಲು ಸಂಸ್ಥೆಗಳಿಗೆ ಸಹಾಯ ಮಾಡಲು ಮಾರ್ಗದರ್ಶನದೊಂದಿಗೆ ಜಗತ್ತಿನಾದ್ಯಂತ ಸರ್ಕಾರಗಳು ಹೆಚ್ಚುತ್ತಿರುವ ಸೈಬರ್ ಬೆದರಿಕೆಗೆ ಪ್ರತಿಕ್ರಿಯಿಸಿವೆ.

ಅಮೆರಿಕದಲ್ಲಿ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಅಂಡ್ ಸ್ಟಾಂಡರ್ಡ್ ಟೆಕ್ನಾಲಜಿ' (NIST) ಸೈಬರ್ ಸೆಕ್ಯೂರಿಟಿ ಫ್ರೇಮ್ ವರ್ಕ್‌ನ್ನು ರಚಿಸಿದೆ. ದುರುದ್ದೇಶಪೂರಿತ ಕೋಡ್ ಪ್ರಸರಣವನ್ನು ಎದುರಿಸಲು ಮತ್ತು ಆರಂಭಿಕ ಪತ್ತೆಗೆ ಸಹಾಯ ಮಾಡಲು, ಫ್ರೇಮ್‌ವರ್ಕ್ ಎಲ್ಲಾ ಎಲೆಕ್ಟ್ರಾನಿಕ್ ಸಂಪನ್ಮೂಲಗಳ ನಿರಂತರ ಮತ್ತು ನೈಜ-ಸಮಯದ ಮೇಲ್ವಿಚಾರಣೆಯನ್ನು ಶಿಫಾರಸು ಮಾಡುತ್ತದೆ.

ಸಿಸ್ಟಂ ಮಾನಿಟರಿಂಗ್ ಪ್ರಾಮುಖ್ಯತೆಯು "ಸೈಬರ್ ಭದ್ರತೆಗೆ ಹತ್ತು ಹಂತಗಳು' ಇಂಗ್ಲೆಂಡ್ ಸರ್ಕಾರದ ರಾಷ್ಟ್ರೀಯ ಸೈಬರ್ ಅದ್ಯತಾ ಕೇಂದ್ರದಿಂದ ಒದಗಿಸಲಾದ ಮಾರ್ಗದರ್ಶನದಲ್ಲಿ ಪ್ರತಿಧ್ವನಿಸುತ್ತದೆ. ಆಸ್ಟ್ರೇಲಿಯಾ ದೇಶದಲ್ಲಿ, 'ಆಸ್ಟ್ರೇಲಿಯನ್ ಸೈಬರ್ ಸೆಕ್ಯೂರಿಟಿ ಸೆಂಟರ್' (ACSC) ಇತ್ತೀಚಿನ ಸೈಬರ್-ಸುರಕ್ಷತಾ ಬೆದರಿಕೆಗಳನ್ನು ಹೇಗೆ ಎದುರಿಸಬಹುದು ಎಂಬುದರ ಕುರಿತು ನಿಯಮಿತವಾಗಿ ಮಾರ್ಗದರ್ಶನವನ್ನು ಪ್ರಕಟಿಸುತ್ತಿದೆ.

### ಇತ್ತೀಚಿನ ಸೈಬರ್ ಬೆದರಿಕೆಗಳು

ವ್ಯಕ್ತಿ ಮತ್ತು ಸಂಸ್ಥೆಗಳು ರಕ್ಷಿಸ ಬೇಕಾದ ಇತ್ತೀಚಿನ ಸೈಬರ್ ಬೆದರಿಕೆಗಳು ಯಾವುವು? ಇಂಗ್ಲೆಂಡ್, ಅಮೆರಿಕ ಮತ್ತು ಆಸ್ಟ್ರೇಲಿಯ ಸರ್ಕಾರಗಳು ವರದಿ ಮಾಡಿರುವ ಕೆಲವು ಸೈಬರ್ ಬೆದರಿಕೆಗಳು ಇಲ್ಲಿವೆ.

### Dridex ಮಾಲ್‌ವೇರ್

ಡಿಸೆಂಬರ್ 2019ರಲ್ಲಿ, U.S. Department of Justice (DoJ) ಜಾಗತಿಕ ಡ್ರಿಡೆಕ್ ಮಾಲ್‌ವೇರ್ ದಾಳಿಯಲ್ಲಿ ಅವರ ಪಾತ್ರಕ್ಕಾಗಿ ಸಂಘಟಿತ ಸೈಬರ್-ಕ್ರಿಮಿನಲ್ ಗುಂಪಿನ ನಾಯಕನ ಮೇಲೆ ಆರೋಪ ಹೊರಿಸಿದೆ. ಈ ದುರುದ್ದೇಶಪೂರಿತ ದಾಳಿಯು ಸಾರ್ವಜನಿಕರು,



**ಲೇಖಕರ ಜೊತೆ ಕಂಪ್ಯೂಟರ್ ವಿಜ್ಞಾನಿ, ಅನಿವಾಸಿ ಭಾರತೀಯ ಡಾ.ರಾಜ್‌ಕುಮಾರ್ ಬಯ್ಯಾ**

ಸರ್ಕಾರ, ಮೂಲಸೌಕರ್ಯ ಮತ್ತು ವಿಶ್ವಾದ್ಯಂತ ವ್ಯಾಪಾರದ ಮೇಲೆ ಕೆಟ್ಟ ಪರಿಣಾಮ ಬೀರಿತು.

ಡ್ರಿಡೆಕ್ಸ್ (Dridex) ಸಾಮರ್ಥ್ಯಗಳ ವ್ಯಾಪ್ತಿಯೊಂದಿಗೆ ಹಣಕಾಸಿನ ಟ್ರೋಜನ್ ಆಗಿದೆ. 2014ರಿಂದ ದಾಳಿಯಿಂದ ಬಲಿಪಶುಗಳಾದವರ ಮೇಲೆ ಪರಿಣಾಮ ಬೀರುತ್ತಿದೆ, ಇದು ಫಿಶಿಂಗ್ ಇ ಮೇಲ್ ಅಥವಾ ಅಸ್ತಿತ್ವದಲ್ಲಿರುವ ಮಾಲ್‌ವೇಲ್‌ಗಳ ಹೊರತಾಗಿಯೂ ಕಂಪ್ಯೂಟರ್‌ಗಳಿಗೆ ಸೋಂಕು ತರುತ್ತದೆ. ಮೋಸದ ವಹಿವಾಟುಗಳಲ್ಲಿ ಬಳಸಬಹುದಾದ ಪಾಸ್‌ವರ್ಡ್‌ಗಳು, ಬ್ಯಾಂಕಿಂಗ್ ವಿವರಗಳು ಮತ್ತು ವೈಯಕ್ತಿಕ ಡೇಟಾವನ್ನು ಕದಿಯಲು ಸಮರ್ಥವಾಗಿದೆ. ಇದು ನೂರಾರು ಮಿಲಿಯನ್‌ಗಳಷ್ಟು ಬೃಹತ್ ಆರ್ಥಿಕ ನಷ್ಟವನ್ನು ಉಂಟುಮಾಡಿದೆ.

ಡ್ರಿಡೆಕ್ಸ್‌ಗಳಿಗೆ ಪ್ರತಿಕ್ರಿಯೆಯಾಗಿ ಇಂಗ್ಲೆಂಡ್ ರಾಷ್ಟ್ರೀಯ ಸೈಬರ ಭದ್ರತಾ ಕೇಂದ್ರವು ಸಾಧನಗಳನ್ನು ಪ್ಯಾಚ್ ಮಾಡಲಾಗಿದೆ. ಆಂಟಿ-ವೈರಸ್ ಆನ್ ಮಾಡಲಾಗಿದೆ. ಅವು ನವೀಕೃತವಾಗಿದೆ. ಫೈಲ್‌ಗಳನ್ನು ಬ್ಯಾಕ್ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಸಾರ್ವಜನಿಕರಿಗೆ ಸಲಹೆ ನೀಡುತ್ತದೆ.

### ರೋ ಮ್ಯಾನ ಹಗರಣಗಳು

ಫೆಬ್ರವರಿ 2020ರಲ್ಲಿ, ಡೇಟಿಂಗ್ ಸೈಟ್‌ಗಳು (Dating Site), ಚಾಟ್ ರೂಮ್‌ಗಳು (Chat Room) ಮತ್ತು ಅಪ್ಲಿಕೇಷನ್‌ಗಳನ್ನು ಬಳಸಿಕೊಂಡು ಸೈಬರ್ ಅಪರಾಧಿಗಳು ಎಸಗುವ ವಿಶ್ವಾಸ ವಂಚನೆಯ ಬಗ್ಗೆ ತಿಳಿದಿರುವಂತೆ ಅಮೆರಿಕ ನಾಗರಿಕರಿಗೆ FBI ಎಚ್ಚರಿಕೆ ನೀಡಿತು. ಅಪರಾಧಿಗಳು ಹೊಸ ಪಾಲುದಾರರನ್ನು ಹುಡುಕುವ ಜನರ ಲಾಭವನ್ನು ಪಡೆದುಕೊಳ್ಳುತ್ತಾರೆ. ವೈಯಕ್ತಿಕ ಡೇಟಾವನ್ನು ನೀಡುವಂತೆ ಪ್ರಚೋದಿಸಿ ಅವರನ್ನು ಬಲಿಪಶುಗಳನ್ನಾಗಿಕೊಳ್ಳುತ್ತಾರೆ.

2019ರಲ್ಲಿ ನ್ಯೂ ಮೆಕ್ಸಿಕೊದಲ್ಲಿ ಪ್ರಣಯ ಸೈಬರ್ ಬೆದರಿಕೆಗಳು 114 ಬಲಿಪಶುಗಳ ಮೇಲೆ ಪರಿಣಾಮ ಬೀರಿದೆ ಎಂದು FBI ವರದಿ ಮಾಡಿದೆ. ಅದರ ಹಣಕಾಸಿನ ನಷ್ಟವು 1.6 ಮಿಲಿಯನ್ ಆಗಿದೆ.

### ಎಮೋಟೆಟ್ ಆಲ್‌ವೇರ್

2019ರ ಕೊನೆಯಲ್ಲಿ, ಮಾಲ್‌ವೇರ್ (Malware) ವ್ಯಾಪಕವಾದ ಜಾಗತಿಕ ಸೈಬರ್ ಬೆದರಿಕೆಯ ಕುರಿತು ಆಸ್ಟ್ರೇಲಿಯನ್ ಸೆಕ್ಯೂರಿಟಿ ಸೆಂಟರ್‌ನ ರಾಷ್ಟ್ರೀಯ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿತು.

ಎಮೋಟೆಟ್ ಅತ್ಯಾಧುನಿಕ ಟ್ರೋಜನ್ ಆಗಿದ್ದು, ಅದು ಡೇಟಾವನ್ನು ಕದಿಯಬಹುದು ಮತ್ತು ಇತರ ಮಾಲ್‌ವೇರ್‌ಗಳನ್ನು ಲೋಡ್ ಮಾಡಬಹುದು. ಎಮೋಟೆಟ್ ಅತ್ಯಾಧುನಿಕ ಪಾಸ್‌ವರ್ಡ್‌ನಲ್ಲಿ ಅಭಿವೃದ್ಧಿ ಹೊಂದುತ್ತದೆ: ಸೈಬರ್ ಬೆದರಿಕೆಗಳಿಂದ ರಕ್ಷಿಸಲು ಸುರಕ್ಷಿತ ಪಾಸ್‌ವರ್ಡ್ ರಚಿಸುವ ಪ್ರಾಮುಖ್ಯತೆ ಹೆಚ್ಚಿದೆ.

### ಇಂಟರ್‌ನೆಟ್ ಆಪ್ಲಿಕೇಷನ್ ಲಿಂಕ್ಸ್

ಇಂಟರ್‌ನೆಟ್ ಆಪ್ಲಿಕೇಷನ್ ಲಿಂಕ್ಸ್ (IoT) ಎಂದರೆ ಸಂವೇದಕಗಳು, ಸಂಸ್ಕರಣಾ ಸಾಮರ್ಥ್ಯ, ತಂತ್ರಾಂಶ ಮತ್ತು ಅಂತರ್ಜಾಲ ಅಥವಾ ಇತರ ಸಂವಹನ ಜಾಲಗಳ ಮೂಲಕ ಇತರ ಸಾಧನಗಳು ಮತ್ತು ವ್ಯವಸ್ಥೆಗಳೊಂದಿಗೆ ದತ್ತಾಂಶವನ್ನು ಸಂಪರ್ಕಿಸುವ ಮತ್ತು ವಿನಿಮಯ ಮಾಡುವ ತಂತ್ರಜ್ಞಾನಗಳೊಂದಿಗೆ ಇರುವ ಭೌತಿಕ ವಸ್ತುಗಳೆಂದು (ಅಥವಾ ಅಂತಹ ವಸ್ತುಗಳ ಗುಂಪುಗಳನ್ನು) ಎನ್ನಬಹುದು.

ಸರ್ವತ್ರ ಕಂಪ್ಯೂಟಿಂಗ್, ಸರಕು ಸಂವೇದಕಗಳು, ಹೆಚ್ಚು ಶಕ್ತಿಯುತವಾದ ಎಂಬೆಡೆಡ್ ಸಿಸ್ಟಮ್‌ಗಳು ಮತ್ತು ಯಂತ್ರಕಲಿಕೆ ಸೇರಿದಂತೆ ಬಹು ತಂತ್ರಜ್ಞಾನಗಳಿಂದಾಗಿ ಈ ಕ್ಷೇತ್ರವು ವಿಕಸನಗೊಂಡಿದೆ. ಎಂಬೆಡೆಡ್ ಸಿಸ್ಟಮ್‌ಗಳ ಸಾಂಪ್ರದಾಯಿಕ ಕ್ಷೇತ್ರಗಳು, ನಿಸ್ತಂತು ಸಂವೇದಕ ಜಾಲಬಂಧಗಳು, ನಿಯಂತ್ರಣ ವ್ಯವಸ್ಥೆಗಳು, ಯಾಂತ್ರೀಕೃತಗೊಂಡ (ಮನೆ ಮತ್ತು ಕಟ್ಟಡ ಸೇರಿದಂತೆ), ಸ್ವತಂತ್ರ ಮತ್ತು ಸಾಮೂಹಿಕವಾಗಿ ವಸ್ತುಗಳ ಅಂತರ್ಜಾಲವನ್ನು ಸಕ್ರಿಯಗೊಳಿಸುತ್ತದೆ. ಗ್ರಾಹಕ ಮಾರುಕಟ್ಟೆಯಲ್ಲಿ, ವಸ್ತುಗಳ ಅಂತರ್ಜಾಲ ತಂತ್ರಜ್ಞಾನವು "ಸ್ಮಾರ್ಟ್‌ಹೋಮ್" ಪರಿಕಲ್ಪನೆಗೆ ಸಂಬಂಧಿಸಿದ ಉತ್ಪನ್ನಗಳಿಗೆ ಸಮಾನಾರ್ಥಕವಾಗಿದೆ. ಇದರಲ್ಲಿ ಸಾಧನ ಮತ್ತು ಉಪಕರಣಗಳು (ಉದಾಹರಣೆಗೆ ಬೆಳಕಿನ ನೆಲೆ ವಸ್ತುಗಳು, ಥರ್ಮೋಸ್ಟಾಟ್‌ಗಳು, ಗೃಹ ಭದ್ರತಾ ವ್ಯವಸ್ಥೆಗಳು, ಕ್ಯಾಮೆರಾಗಳು ಮತ್ತು ಇತರ ಗೃಹೋಪಯೋಗಿ ಉಪಕರಣಗಳು) ಒಂದನ್ನು ಅಥವಾ ಹೆಚ್ಚು ಪರಿಸರದಲ್ಲಿರುವ ವ್ಯವಸ್ಥೆಗಳನ್ನು ಬೆಂಬಲಿಸುತ್ತದೆ. ಅವುಗಳನ್ನು ಆ ಪರಿಸರ ವ್ಯವಸ್ಥೆಗೆ ಸಂಬಂಧಿಸಿದ ಸಾಧನಗಳಾದ ಸ್ಮಾರ್ಟ್ ಫೋನ್ (Smart phone) ಮತ್ತು ಸ್ಮಾರ್ಟ್ ಸ್ಪೀಕರ್‌ಗಳ (Smart speaker) ಮೂಲಕ ನಿಯಂತ್ರಿಸಬಹುದು. ವಸ್ತುಗಳ ಅಂತರ್ಜಾಲವನ್ನು ಆರೋಗ್ಯ ವ್ಯವಸ್ಥೆಯಲ್ಲಿಯೂ ಬಳಸಲಾಗುತ್ತದೆ.

ವಿಶೇಷವಾಗಿ ಗೌಪ್ಯತೆ ಮತ್ತು ಭದ್ರತೆಯ ಕ್ಷೇತ್ರಗಳಲ್ಲಿ "ವಸ್ತುಗಳ ಅಂತರ್ಜಾಲ" ತಂತ್ರಜ್ಞಾನ ಮತ್ತು ಉತ್ಪನ್ನಗಳ ಬೆಳವಣಿಗೆಯಲ್ಲಿನ




**ಸಮಾರೋಪ ಸಮಾರಂಭದಲ್ಲಿ ಡಾ. ಸುಹಾಸ್ ಜಿ.ಕೆ., ಪ್ರೊ.ಇಜಾಜ್ ಅಮಹದ್ ಪರೀಫ್, ಡಾ.ಬಸವೇಶ ಡಿ., ಡಾ.ನರೇಂದ್ರ ವಿಶ್ವನಾಥ್, ಶ್ರೀ ಎಂ.ಎಸ್.ಪಾಟೀಲ್, ಡಾ. ಹೆಚ್.ಎ. ದಿನೇಶ್, ಶ್ರೀ ಸಾಯಿರಾಮ್ ಸಂತೋಷ್**

ಅಪಾಯಗಳ ಬಗ್ಗೆ ಬಹಳ ಕಾಳಜಿಯಿದೆ, ಇದರ ಪರಿಣಾಮವಾಗಿ ಈ ಕಾಳಜಿಗಳನ್ನು ಪರಿಹರಿಸಲು ಅಂತಾರಾಷ್ಟ್ರೀಯ ಮತ್ತು ಸ್ಥಳೀಯ ಮಾನದಂಡಗಳ ಅಭಿವೃದ್ಧಿ, ಮಾರ್ಗಸೂಚಿ ಮತ್ತು ನಿಯಂತ್ರಣ ಚೌಕಟ್ಟುಗಳು ಸೇರಿದಂತೆ ಉದ್ಯಮ ಮತ್ತು ಸರ್ಕಾರಿ ಕ್ರಮಗಳು ಪ್ರಾರಂಭವಾಗಿವೆ.

**ಕ್ಲೌಡ್ ಕಂಪ್ಯೂಟಿಂಗ್ (Cloud Computing)**

1. ಕ್ಲೌಡ್ ಕಂಪ್ಯೂಟಿಂಗ್ ಎನ್ನುವುದು ಕಂಪ್ಯೂಟರ್ ಸಿಸ್ಟಮ್‌ಗಳ ಸಂಪನ್ಮೂಲಗಳ ಬೇಡಿಕೆಯ ಮೇಲೆ ಲಭ್ಯವಾಗಿದೆ, ವಿಶೇಷವಾಗಿ ಡೇಟಾ ಸಂಗ್ರಹಣೆ (ಕ್ಲೌಡ್ ಸ್ಟೋರೇಜ್) ಮತ್ತು ಕಂಪ್ಯೂಟಿಂಗ್ ಪವರ್ (computing power), ಬಳಕೆದಾರರಿಂದ ನೇರ ಸಕ್ರಿಯ ನಿರ್ವಹಣೆಯಲ್ಲಿದೆ.
2. ದೊಡ್ಡಮೋಡಗಳು ಅನೇಕ ಸ್ಥಳಗಳಲ್ಲಿ ವಿತರಿಸಲಾದ ಕಾರ್ಯಗಳನ್ನು ಹೊಂದಿವೆ, ಪ್ರತಿಸ್ಥಳವು ಡೇಟಾ ಕೇಂದ್ರವಾಗಿದೆ .ಕ್ಲೌಡ್ ಕಂಪ್ಯೂಟಿಂಗ್ ಸಂಬದ್ಧತೆಯನ್ನು ಸಾಧಿಸಲು ಸಂಪನ್ಮೂಲಗಳ ಹಂಚಿಕೆಯ ಮೇಲೆ ಅವಲಂಬಿತವಾಗಿ ಮತ್ತು ವಿಶಿಷ್ಟವಾಗಿ "ಪೇ–ಆಸ್–ಯು–ಗೋ" (Pay as you go) ಮಾದರಿಯನ್ನು ಬಳಸುತ್ತದೆ. ಇದು ಬಂಡವಾಳ ವೆಚ್ಚಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಆದರೆ ಬಳಕೆದಾರರಿಗೆ ಅನಿರೀಕ್ಷಿತ ನಿರ್ವಹಣಾ ವೆಚ್ಚಗಳಿಗೆ ಕಾರಣವಾಗಬಹುದು. ಸಾರ್ವಜನಿಕ ಮತ್ತು ಹೈಬ್ರಿಡ್ ಕ್ಲೌಡ್‌ಗಳ (Hybrid Cloud) ವಕೀಲರು ಕ್ಲೌಡ್ ಕಂಪ್ಯೂಟಿಂಗ್ (Cloud computing) ಕಂಪನಿಗಳಿಗೆ ಅಪ್–ಫ್ರಂಟ್ ಐ.ಟಿ. ಮೂಲಸೌಕರ್ಯ ವೆಚ್ಚಗಳನ್ನು ತಪ್ಪಿಸಲು ಅಥವಾ ಕಡಿಮೆ ಮಾಡಲು ಅನುಮತಿಸುತ್ತದೆ ಎನ್ನಲಾಗುತ್ತದೆ. ಕ್ಲೌಡ್ ಕಂಪ್ಯೂಟಿಂಗ್ ಆಧಾರಿತ ನಿರ್ವಹಣಾ ಸಾಮರ್ಥ್ಯ ಮತ್ತು ಕಡಿಮೆ ನಿರ್ವಹಣೆಯೊಂದಿಗೆ ಉದ್ಯಮಗಳು ತಮ್ಮ ಅಪ್ಲಿಕೇಷನ್‌ಗಳನ್ನು ಪಡೆಯಲು ಮತ್ತು ವೇಗವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಏರಿಳಿತ ಮತ್ತು ಅನಿರೀಕ್ಷಿತ ಬೇಡಿಕೆಯನ್ನು ಪೂರೈಸಲು ಸಂಪನ್ಮೂಲಗಳನ್ನು ಹೆಚ್ಚು ವೇಗವಾಗಿ ಹೊಂದಿಸಲು ಐ.ಟಿ ತಂಡಗಳನ್ನು ಸಕ್ರಿಯಗೊಳಿಸುತ್ತದೆ ಎಂದು ಪ್ರತಿಪಾದಕರು ಹೇಳುತ್ತಾರೆ. ಬರಸ್ಟ್ ಕಂಪ್ಯೂಟಿಂಗ್ (Burst Computing) ಸಾಮರ್ಥ್ಯ ಗರಿಷ್ಠ ಬೇಡಿಕೆಯ ಕೆಲವು ಸಮಯಗಳಲ್ಲಿ ಹೆಚ್ಚಿನ ಕಂಪ್ಯೂಟಿಂಗ್ ಶಕ್ತಿ ಒದಗಿಸುತ್ತದೆ.

**ಕೊನೆಯ ಮಾತು.** ಇಂತಹ ಮಹತ್ವಪೂರ್ಣ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜನೆ ಮಾಡಲು ಬೆಂಬಲ ನೀಡಿದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಮತ್ತು ಮಾರ್ಗದರ್ಶನ ನೀಡಿದ ಬೆಳಗಾವಿ ತಾಂತ್ರಿಕ ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

# ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶ್ರೀ ಉತ್ಸವ ವಾರ್ಷಿಕೋತ್ಸವ-2023



**ಚಿತ್ರದಲ್ಲಿ ಶ್ರೀದೇವಿ ಛಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಅಂತರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು ಮಹಮ್ಮದ್ ಇಸ್ಮಾಯಿಲ್, ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಹುಲಿನಾಯ್ಕರ್, ಶ್ರೀದೇವಿ ಛಾರಿಟಬಲ್ ಟ್ರಸ್ಟ್‌ನ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಡಾ.ಲಾವಣ್ಯ, ಅಂಬಿಕಾ ಎಂ ಹುಲಿನಾಯ್ಕರ್ ಮತ್ತು ಪ್ರಾಂಶುಪಾಲರಾದ ಡಾ.ನರೇಂದ್ರ ವಿಸ್ವನಾಥ್, ಮುಂತಾದವರು ಉಪಸ್ಥಿತರಿದ್ದರು.**

"ದೇಶದ ಜನಸಂಖ್ಯೆಯಲ್ಲಿ ಇಂದು ಶೇಕಡ 60ರಷ್ಟಕ್ಕೂ ಹೆಚ್ಚು ಯುವಜನಾಂಗವಿದೆ. ಭಾರತ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಲು ಈ ಯುವಜನಾಂಗವೇ ಶಕ್ತಿಯಾಗಿದೆ. ಯುವಕ–ಯುವತಿಯರು ತಮ್ಮ ಮನಸ್ಸು ಮತ್ತು ಕಾಯವನ್ನು ಸಮ್ಮಿಲನ ಮಾಡಿಕೊಳ್ಳಬೇಕು. ಕೇವಲ ಬೌದ್ಧಿಕ ದೃಢತೆ ರೂಢಿಸಿಕೊಂಡರೆ ಸಾಲದು. ಅನಾರೋಗ್ಯವುಳ್ಳ ಯುವಶಕ್ತಿ ದೇಶಕ್ಕೆ ಹೊರೆ. ಉತ್ತಮ ದೇಹದಾರ್ಢ್ಯತೆ ಹೊಂದಿದರೆ ಮಾತ್ರ ಯುವಕರು ಶ್ರೇಷ್ಠ ಸಾಧನೆ ಮಾಡಲು ಸಾಧ್ಯವಾಗುತ್ತದೆ. ನಮ್ಮ ಸಮಾಜದಲ್ಲಿ ಕ್ರೀಡೆಗೆ ದೊರೆಯಬೇಕಾದ ಸ್ಥಾನ ದೊರೆಯುದಿರುವುದು ದುರ್ದೈವದ ವಿಚಾರ" ಎಂದು ಅಂತರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು ಮಹಮ್ಮದ್ ಇಸ್ಮಾಯಿಲ್ ಅವರು ಮೇ.2ರಂದು ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಶ್ರೀ ಉತ್ಸವ–2023 ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಹೇಳಿದರು.

ನಂತರ ಶ್ರೀಯುತರು ಮಾತನಾಡಿ "ಯಾವುದೇ ವಿಜ್ಞಾನಿ, ಕ್ರೀಡಾಪಟು, ಗುರು, ಸಾಹಿತಿ ಮತ್ತು ಇತರ ಕ್ಷೇತ್ರದ ಸಾಧಕರು ತಮ್ಮ ಜೀವಿತದ ಕಾಲದಲ್ಲಿ ಮಾಡಿದ ಸಾಧನೆಗಳು ನಂತರದ ದಿನಗಳಲ್ಲಿ ರಾಷ್ಟ್ರದ ಶ್ರೇಷ್ಠ ಸಾಧನೆಗಳಾಗುತ್ತವೆ. ಇಂದು ಪಿ.ಟಿ.ಉಷಾ ಮತ್ತು ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಸದಾ ಸ್ಮರಣೆಗೆ ಅರ್ಹರಾಗಿದ್ದಾರೆ. ಯುವಜನಾಂಗ ಶಿಕ್ಷಣ ಮತ್ತು ನಂತರದಲ್ಲೂ ಸಮಯ ವ್ಯರ್ಥ ಮಾಡದೆ ಅರ್ಥಪೂರ್ಣ ಜೀವನ ನಡೆಸುವ ಗುರಿಯನ್ನಿಟ್ಟುಕೊಂಡು ಸಾಧನೆ ಕೈಗೊಳ್ಳಬೇಕಾದ ಅವಶ್ಯಕತೆಯಿದೆ. ಉತ್ತಮ ಜೀವನಕ್ಕೆ ವ್ಯಾಯಾಮ, ಕ್ರೀಡೆ ಮತ್ತು ಕಲೆಯಂತಹ ಆರೋಗ್ಯಕರ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಛಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದರು.

ಸಮಾರಂಭದ ಗೌರವಾನ್ವಿತ ಅತಿಥಿಗಳಾಗಿದ್ದ ಶ್ರೀದೇವಿ ಛಾರಿಟಬಲ್ ಟ್ರಸ್ಟ್‌ನ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ಸಮಾಜದ ಹಲವಾರು ಸಮಸ್ಯೆಗಳಿಗೆ ಸುಲಭವಾದ ಮತ್ತು ಸುಗಮವಾದ ಪರಿಹಾರ ದೊರಕಿಸಿಕೊಡುವುದೇ ಇಂಜಿನಿಯರಿಂಗ್ ಶಿಕ್ಷಣದ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ನಿಗದಿತ ಪಠ್ಯಕ್ರಮದೊಂದಿಗೆ ಇತರೆ ಕೌಶಲ್ಯಗಳು ಮತ್ತು ಹೊರಪ್ರಪಂಚದ ಸಾಂಸ್ಥಿಕ ಅನುಭವಗಳನ್ನು ಪಡೆದುಕೊಂಡು ಉತ್ತಮವಾದ ಆಟೋಟಗಳು, ಸಂಗೀತ, ಕಲೆಗಳಲ್ಲಿ ಅಭಿರುಚಿ ಬೆಳೆಸಿಕೊಂಡು ಪರಿಪೂರ್ಣ ವ್ಯಕ್ತಿತ್ವ ಹೊಂದಲಿ. ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲು ಸಕಲ ಸೌಲಭ್ಯಗಳನ್ನು ಒದಗಿಸಲಾಗಿದೆ" ಎಂದರು.

ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಗಳಾಗಿದ್ದ ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಹುಲಿನಾಯ್ಕರ್ ಅವರು ಮಾತನಾಡುತ್ತಾ "ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡಲಾಗಿದ್ದು ವಿದ್ಯಾರ್ಥಿಗಳು ವ್ಯಾಸಂಗ ಮತ್ತು ಕಲಿಕೆಯೇತರ ಚಟುವಟಿಕೆಗಳೆರಡರಲ್ಲೂ ಹೆಚ್ಚಿನ ಸಾಧನೆ ಮಾಡುತ್ತಿರುವುದು ಶ್ಲಾಘನೀಯ" ಎಂದರು.

ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್‌ರವರು ವಾರ್ಷಿಕ ವರದಿ ಮಂಡಿಸಿ "ವಿದ್ಯಾರ್ಥಿಗಳು ಎಲ್ಲ ಚಟುವಟಿಕೆಗಳಲ್ಲೂ ಕ್ರಿಯಾಶೀಲವಾಗಿ ಪಾಲ್ಗೊಳುವುದರ ಮೂಲಕ ಅದರ ಪ್ರಯೋಜನ ಪಡೆಯಬೇಕು" ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಾಲಿಬಾಲ್ ಮತ್ತು ಕ್ರಿಕೆಟ್ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತವಾದ ತಂಡಗಳಿಗೆ ಬಹುಮಾನ ನೀಡಲಾಯಿತು.

ಶ್ರೀದೇವಿ ಟ್ರಸ್ಟಿಗಳಾದ ಡಾ.ಲಾವಣ್ಯ, ಅಂಬಿಕಾ ಎಂ ಹುಲಿನಾಯ್ಕರ್, ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ ಹಾಗೂ ವಿವಿಧ ವಿಭಾಗಗಳಾದ ಮುಖ್ಯಸ್ಥರಾದ ಡಾ. ಕೆ.ಎಸ್.ರಾಮಕೃಷ್ಣ, ಡಾ.ಸಿ.ನಾಗರಾಜ, ಡಾ.ಎನ್.ಚಂದ್ರಶೇಖರ್, ಡಾ.ಬಸವೇಶ್, ಪ್ರೊ.ಸಿ.ವಿ.ಷಣ್ಮುಖಸ್ವಾಮಿ, ಪ್ರೊ.ಜಿ.ಮಹೇಶ್‌ಕುಮಾರ್, ಡಾ.ಕಿಶೋರ್‌ಕುಮಾರ್, ಪ್ರೊ.ಕೆ.ಪಿ.ಚಂದ್ರಯ್ಯ, ಡಾ.ಪಿ.ಜೆ.ಸದಾಶಿವಯ್ಯ, ಪ್ರೊ.ಐಜಾಜ್ ಅಹಮದ್ ಷರೀಫ್, ಪ್ರೊ.ಜಿ.ಹೆಚ್.ರವಿಕುಮಾರ್ ಮುಂತಾದವರು ಭಾಗವಹಿಸಿದ್ದರು.

ಕಾರ್ಯಕ್ರಮದ ಮುಖ್ಯಸಂಯೋಜಕರಾದ ಪ್ರೊ.ಬಿ.ಎನ್.ಪ್ರತಾಪ್‌ರವರು ಸ್ವಾಗತಿಸಿದರು, ದೀಪಾ ಆರಾಧ್ಯಮಠ ಪ್ರಾರ್ಥಿಸಿದರು. ಪ್ರೊ.ಜಿ.ಎಂ. ಕಿರಣ್‌ರವರು ವಂದಿಸಿದರು.

**▪ ವರದಿ: ಎನ್. ಆನಂದ**

## ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲಿ: ಸಾಧನಾ ಅಶೋಕ್ ಪೋಟೆ

"ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಅವಧಿಯಲ್ಲಿ ಇತರೆ ವಿಚಾರಗಳಿಗೆ ಯಾವ ರೀತಿಯಲ್ಲೂ ಪ್ರಾಮುಖ್ಯತೆ ಕೊಡಬೇಕಾಗಿಲ್ಲ. ವಿದ್ಯೆ ಕಲಿಕೆ ತಪ್ಪಸ್ಸಿದ್ದಂತೆ! ನಿಮ್ಮ ಗಮನ ಮತ್ತು ಆಸಕ್ತಿ ಬೇರೆ ಕಡೆ ಹೋದರೆ ಗುರಿ ಮಟ್ಟಲು ಸಾಧ್ಯವಾಗುವುದಿಲ್ಲ. ವಿದ್ಯೆಯ ಜೊತೆ ಬದುಕಿನಲ್ಲಿ ಯಶಸ್ವಿಯಾಗಲು ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು, ಇಂದಿನ ದಿನಗಳಲ್ಲಿ ತಂದೆ– ತಾಯಿಗಳು ತಮ್ಮ ಮಕ್ಕಳ ವಿಚಾರದಲ್ಲಿ ದೊಡ್ಡ ರೀತಿಯಲ್ಲಿ ಕನಸು ಕಂಡಿರುತ್ತಾರೆ. ಅದನ್ನು ನಿಜ ಮಾಡುವುದು ಮಕ್ಕಳಾದ ನಿಮ್ಮ ಮೇಲಿರುತ್ತದೆ. ವಿದ್ಯಾರ್ಥಿಗಳು ಮುಖ್ಯವಾಗಿ ಉತ್ತಮ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಭವಿಷ್ಯಕ್ಕಾಗಿ ಕೌಶಲ್ಯವನ್ನು ಹಾಗೂ ಸಮಾಜದಲ್ಲಿ ನೆಮ್ಮದಿಯಾಗಿ ಬದುಕಲು ಸೌಜನ್ಯವನ್ನು ಬಳಸಿಕೊಳ್ಳಬೇಕು" ಎಂದು ಬೆಂಗಳೂರಿನ ಕೌಶಲ್ಯ ಭವನದ ಜಂಟಿ ನಿರ್ದೇಶಕಿಯಾದ ಸಾಧನಾ ಅಶೋಕ್ ಪೋಟೆ ಅವರು ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜು ವತಿಯಿಂದ ಜೂನ್ 8ರಂದು ಹಮ್ಮಿಕೊಂಡಿದ್ದ 'ಶ್ರೀಸಂಭ್ರಮ ವಾರ್ಷಿಕೋತ್ಸವ–2023' ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ತಿಳಿಸಿದರು.

ತುಮಕೂರಿನ ಜಿಲ್ಲಾ ಕೌಶಲ್ಯಾಭಿವೃದ್ಧಿ ಉಪನಿರ್ದೇಶಕರಾದ ವಿಶ್ವೇಶ್ವರಯ್ಯ ಅವರು ಮಾತನಾಡುತ್ತಾ "ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಕೌಶಲ್ಯ, ಶ್ರದ್ಧೆ, ಸಮಯಪ್ರಜ್ಞೆ ಇತ್ಯಾದಿಗಳ ಮೂಲಕ ಯಶಸ್ಸನ್ನು ಸಾಧಿಸಬಹುದು. ಉತ್ತಮ ಫಲಿತಾಂಶ ಪಡೆದವರು ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳೆಂದರೆ ವಿಶೇಷ ಚೈತನ್ಯವಿದ್ದಂತೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಮಾಡಿದರೆ ಉತ್ತಮ ಜೀವನದ ಶಿಖರಕ್ಕೆ ಏರಬಹುದು" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಪಾಲಿಟೆಕ್ನಿಕ್ ಕೋರ್ಸ್ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶದ ಬಗ್ಗೆ ಮಾಹಿತಿ ನೀಡಿದರು. ವಿದ್ಯಾರ್ಥಿಗಳಲ್ಲಿ ಸಮಯ ಪ್ರಜ್ಞೆ ಮತ್ತು ಕರ್ತವ್ಯ ಪ್ರಜ್ಞೆಗಳಿರುವ ಅಗತ್ಯವನ್ನು ಸವಿಸ್ತಾರವಾಗಿ ವಿವರಿಸಿದರು. ವಿದ್ಯಾರ್ಥಿಗಳು ತಮ್ಮ ತಂದೆ–ತಾಯಿ, ಬಂಧು–ಬಾಂಧವರು, ಹಿರಿಯರು ಮತ್ತು ಗುರುಗಳ ಬಗ್ಗೆ ಪ್ರೀತಿ ವಿಶ್ವಾಸವನ್ನು ಬೆಳಸಿಕೊಳ್ಳುವ ಅಗತ್ಯವನ್ನು ಹೇಳಿದರು.

ಇದೇ ಸಂದರ್ಭದಲ್ಲಿ ತಿಪಟೂರಿನ ಪಲ್ಲಾಗಟ್ಟಿ ಅಡವಪ್ಪ ಕಾಲೇಜಿನ ಸಹ ದೈಹಿಕ ಶಿಕ್ಷಣ ನಿರ್ದೇಶಕರಾದ ಬಿ.ಶ್ರೀನಿವಾಸ್‌ರವರು ಮಾತನಾಡುತ್ತಾ "ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡ ಹೆಚ್ಚಾಗಿರುವುದರಿಂದ ಕ್ರೀಡೆಯು ಆ ಒತ್ತಡವನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ವಿದ್ಯಾರ್ಥಿಗಳು ಪಠ್ಯದ ಜೊತೆ ಕ್ರೀಡೆಗೂ ಆದ್ಯತೆ ಕೊಡುವುದು ಅಗತ್ಯವಿದೆ. ಕ್ರೀಡೆಯಿಂದ ಮಾನಸಿಕ ಮತ್ತು ದೈಹಿಕ ಸದೃಢತೆಯನ್ನು ಹೊಂದಬಹುದು. ಪ್ರತಿಯೊಬ್ಬರೂ ತಮ್ಮ ವಿದ್ಯಾಭ್ಯಾಸದ ಸಂದರ್ಭದಲ್ಲಿಯೇ ಮುಂದಿನ ಭವಿಷ್ಯದ ಬಗ್ಗೆ ಕನಸನ್ನು ಕಂಡಾಗ ಅಂತಹವರು ಯಶಸ್ಸು ಗಳಿಸುತ್ತಾರೆ. ಉತ್ತಮ ಫಲಿತಾಂಶ ಪಡೆದವರು ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ" ಎಂದರು.

# ಅರ್ಹರಿಗೆ ಸಿಗಲಿ ಸವಲತ್ತು





◀◀ ...ಮೊದಲನೇ ಪುಟದಿಂದ

ನಾವು ಆದಾಯ ತೆರಿಗೆ ಕಟ್ಟುತ್ತೇವೆ ನಮ್ಮ ಹಣ ಇಂತಹವರಿಗೆ ಕೊಡಲು ಸಾಧ್ಯವಿಲ್ಲವೆಂದು ಕೆಲವರು ಹೇಳುತ್ತಾರೆ. ಈ ದೇಶದ ಎಲ್ಲಾ ನಾಗರಿಕರೂ ತೆರಿಗೆ ಪಾವತಿ ಮಾಡುತ್ತಾರೆ ಎಂಬ ಸತ್ಯ ಟೀಕೆ ಮಾಡುವವರಿಗೆ ತಿಳಿದಿಲ್ಲ. ಜಿ.ಎಸ್.ಟಿ. ತೆರಿಗೆ ಪಾವತಿ ಮಾಡದವರು ಯಾರಿದ್ದಾರೆ? ಆದಾಯ ತೆರಿಗೆ ಪಾವತಿ ಮಾಡುವವರು ಮಾತ್ರ ದೇಶಭಕ್ತರಲ್ಲ, ಜಿ.ಎಸ್.ಟಿ. ಪಾವತಿ ಮಾಡುವ ಸಾಮಾನ್ಯನೂ ದೇಶದ ವಿಚಾರದಲ್ಲಿ ಶ್ರದ್ಧೆಯನ್ನಿಟ್ಟುಕೊಂಡಿದ್ದಾನೆ. ಅವರ ಸಂಖ್ಯೆ ಹೆಚ್ಚಿದ್ದು ದೇಶದ ಸಂಪನ್ಮೂಲ ಸಂಗ್ರಹಣೆಯಲ್ಲಿ ಅವರ ಪಾತ್ರ ದೊಡ್ಡದಿದೆ.

ಇನ್ನು ಬಡವರಿಗೆ ಮಾಡಿದ ಕಲ್ಯಾಣ ಕಾರ್ಯಕ್ರಮಗಳನ್ನು ಟೀಕಿಸುವವರಿಗೆ ಭಾರತದ ಸಂವಿಧಾನದ ಆಶಯವೇ ಗೊತ್ತಿಲ್ಲ ಎನ್ನಬೇಕು. ನೂರು ಜನ ಹಸಿದು ಕುಳಿತಿದ್ದರೆ ದುಡ್ಡಿದ್ದವರು ಮೃಷ್ಟಾನ್ನ ಭೋಜನ ಮಾಡಲು ಮುಂದಾಗಬಹುದು. ಜವಾಬ್ದಾರಿಯುತ ನಾಗರಿಕ ಸರ್ಕಾರ ಯಾರನ್ನೂ ಹಸಿವಿನಿಂದ ಮಲಗಿಸುವಂತಿಲ್ಲ. ಭಾರತದ ಸರ್ವೋಚ್ಚ ನ್ಯಾಯಾಲಯ ಈ ವಿಚಾರದಲ್ಲಿ ಕಟುವಾದ ಅಭಿಪ್ರಾಯ ವ್ಯಕ್ತಪಡಿಸಿದ ಮೇಲೆ 'ಆಹಾರ ರಕ್ಷಣೆ ಕಾಯ್ದೆ' ಅನುಷ್ಠಾನಕ್ಕೆ ಬಂತು. 2013ರ ಜುಲೈನಲ್ಲಿ ಈ ಕಾಯ್ದೆ ಜಾರಿಯಾಯಿತು.

ಕರ್ನಾಟಕ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರ 2023–24ಕ್ಕೆ 3.09ಲಕ್ಷ ಕೋಟಿ.ರೂ ಆಯ–ವ್ಯಯವನ್ನು ಮಂಡಿಸಿತ್ತು. ಜೊತೆಗೆ 67,462 ಕೋಟಿ.ರೂಗಳ ಸಾಲ ಸೌಲಭ್ಯವನ್ನು ಈ ಸರ್ಕಾರ ಪಡೆದುಕೊಂಡಿತ್ತು. ಸಿದ್ದರಾಮಯ್ಯ ಅವರ ಸರ್ಕಾರ ಹೆಚ್ಚು ಕಡಿಮೆ ಈ ಮೊತ್ತಕ್ಕೆ ಅಥವಾ ಇನ್ನೂ ಸ್ವಲ್ಪ ಹೆಚ್ಚಿನ ಮೊತ್ತದ ಆಯ–ವ್ಯಯವನ್ನು ಮಂಡಿಸಬಹುದು. ಈ ಕಲ್ಯಾಣ ಕಾರ್ಯಕ್ರಮಗಳಿಗೆ ಒಂದೇ ಸಲ ಹಣ ಒದಗಿಸಬೇಕಾಗಿಲ್ಲ. ಹಂತ ಹಂತವಾಗಿ ಸಂಪನ್ಮೂಲ ಕೊಡಬಹುದು. ಭಾರತ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಕೊಡಬೇಕಾದ ತೆರಿಗೆ ಬಾಬ್ತಿನ ಹಣವನ್ನು ಒಟ್ಟಾರೆ ಬಿಡುಗಡೆ ಮಾಡಿದರೆ ಹೆಚ್ಚು ತೊಂದರೆಯಿಲ್ಲದೆ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬಹುದು.

ಚುನಾವಣೆಯ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಅನುಷ್ಠಾನ ಮಾಡಬೇಕೇ ಹೊರತು ಅರ್ಹ ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನ ದೊರೆಯಬೇಕು ಎಂಬುದನ್ನು ಯಾರೂ ಮರೆಯಬಾರದು. ಆದಾಯ ತೆರಿಗೆ ಪಾವತಿ ಮಾಡುವವರಿಗೆ ಉಚಿತ ವಿದ್ಯುತ್ ಕೊಟ್ಟರೆ ಅದು ಅಪಹಾಸ್ಯದ ಸಂಗತಿಯಾಗುತ್ತದೆ. ನೀತಿ ಆಯೋಗವೇ ಎಲ್ಲ ಸಮಾಜೋಮುಖಿ ಕಾರ್ಯಕ್ರಮಗಳು ಬಡತನದ ರೇಖೆಗಿಂತ ಕೆಳಗಿನವರಿಗೆ ಮಾತ್ರ ಎಂಬುದನ್ನು ಸ್ಪಷ್ಟಪಡಿಸಿದೆ. ಈ ಕಾರ್ಯಕ್ರಮಗಳನ್ನು 'ಬಿಟ್ಟಿ' 'ಉಚಿತ' ಎನ್ನುವುದೇ ತಪ್ಪು. ಸುಸಂಸ್ಕೃತ ನಾಗರಿಕ ಸಮಾಜ ತನ್ನಲ್ಲಿರುವ ಆರ್ಥಿಕ ದುರ್ಬಲರಿಗೆ ಮನಃಪೂರ್ವಕವಾಗಿ ನೀಡುವ ಸಹಾಯವಿದು. ಆಡಳಿತ ನಿರ್ವಹಿಸುವವರಿಗೆ ಬಡವರ ವಿಚಾರದಲ್ಲಿರುವ ಬದ್ಧತೆಯನ್ನು ಇಂತಹ ಕಾರ್ಯಕ್ರಮಗಳು ತೋರಿಸುತ್ತವೆ.

ಸರ್ಕಾರ ಅನುಷ್ಠಾನ ಮಾಡುವ ಕಲ್ಯಾಣ ಕಾರ್ಯಕ್ರಮಗಳು ಜನತೆಯ ಬದುಕಿನಲ್ಲಿ ಬೀರುವ ಮಹತ್ವ ಬಹು ದೊಡ್ಡದು. ಶ್ರೀಮತಿ ಇಂದಿರಾ ಗಾಂಧಿ ಅವರ ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ 'ಜೀತ ಪದ್ಧತಿಯ ನಿವಾರಣೆ' ಪ್ರಮುಖ ಕಾರ್ಯಕ್ರಮವಾಗಿತ್ತು. ಅರವತ್ತರ ದಶಕದಲ್ಲಿ ಕರ್ನಾಟಕದಲ್ಲಿ ದೊಡ್ಡ ರೈತರ ಮನೆಯಲ್ಲಿ ಜೀತದಾಳುಗಳು ಎಷ್ಟಿದ್ದರೆಂಬುದು ಇಂದಿನ ಪೀಳಿಗೆಗೆ ಗೊತ್ತಿಲ್ಲದ ವಿಚಾರ. ಈಗ ಜೀತ ಪದ್ಧತಿ ಹೆಚ್ಚು ಕಡಿಮೆ ಮಾಯವಾಗಿದೆ.

ನಾವು ಕಂಡಂತಹ ಕೆಲವು ಸಂಗತಿಗಳನ್ನು ನೋಡಬಹುದು. 1983ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮೊತ್ತ ಮೊದಲಬಾರಿಗೆ 'ಉಚಿತ ಪ್ರಯಾಣದ ಬಸ್ಸು ಪಾಸ್' ಯೋಜನೆಯನ್ನು ಜಾರಿಗೆ ತಂದರು. ಅದರಿಂದ ಬಹುಮಟ್ಟಿನ ಗ್ರಾಮಗಳಲ್ಲಿ ಹೆಣ್ಣು ಮಕ್ಕಳು ಪದವಿ ಪಡೆದಿದ್ದಾರೆ. ಇನ್ನು ಗಂಡು ಹುಡುಗರು ದೊಡ್ಡ ನಗರಗಳಲ್ಲಿ ಉತ್ತಮ ಉದ್ಯೋಗ ಪಡೆದಿದ್ದಾರೆ. ಅದೇ ರೀತಿ ರಾಮಕೃಷ್ಣ ಹೆಗಡೆ ಅವರ ಎರಡು ರೂಪಾಯಿಗಳಿಗೆ ಕೆ.ಜಿ. ಅಕ್ಕಿ ಎಂಬ ಯೋಜನೆಯಿಂದಲೂ ಅತ್ಯಂತ ಬಡವರಿಗೆ ತುಂಬ ಅನುಕೂಲವಾಯಿತು. ಈ ಯೋಜನೆಯ ಪಿತಾಮಹ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಎನ್.ಟಿ.ರಾಮರಾವ್.

1999ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಸರ್ಕಾರ ರೂಪಿಸಿದ 'ಬಿಸಿಯೂಟ' ಯೋಜನೆ ಇಡೀ ರಾಷ್ಟ್ರಕ್ಕೆ 'ಮಾಡೆಲ್ ಯೋಜನೆ' ಎಂಬ ಖ್ಯಾತಿ ಪಡೆಯಿತು. ಬಿಸಿಯೂಟದಿಂದಾಗಿ ಶಾಲೆಗೆ ಬರುವ ಮಕ್ಕಳ ಸಂಖ್ಯೆ ದ್ವಿಗುಣಗೊಂಡಿತು. ಮಕ್ಕಳಲ್ಲಿದ್ದ ಅಪೌಷ್ಟಿಕತೆ ಕಡಿಮೆಯಾಗಲು ಇದು ಪ್ರಯೋಜನವಾಯಿತು. ವಿಶ್ವ ಆರೋಗ್ಯ ಸಂಸ್ಥೆ ಸಹ ಈ ಯೋಜನೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಂದ 'ಸೈಕಲ್ ಭಾಗ್ಯ' ಯೋಜನೆ ಮಕ್ಕಳು ಶಾಲೆಗೆ ಬರಲು ಪ್ರೇರಣೆ ನೀಡಿದೆ. ಜೊತೆಗೆ ಬಡತನದ ರೇಖೆಗಿಂತ ಕೆಳಗಿನ ಕುಟುಂಬಗಳಲ್ಲಿ ಜನಿಸಿದ ಹೆಣ್ಣು ಮಗುವಿಗೆ ಸಹಾಯ ಮಾಡುವ 'ಭಾಗ್ಯಲಕ್ಷ್ಮೀ' ಯೋಜನೆ ಹೆಣ್ಣು–ಗಂಡುಗಳ ಅನುಪಾತ ರಕ್ಷಣೆ ಮಾಡುವುದರಲ್ಲಿ ಸಹಾಯ ಮಾಡುತ್ತಿದೆ. ಅದೇ ರೀತಿ ಸಿದ್ದರಾಮಯ್ಯ ಅವರು 2013ರಲ್ಲಿ ಜಾರಿಗೆ ತಂದ 'ಅನ್ನಭಾಗ್ಯ ಯೋಜನೆ' ಸಮಾಜದಲ್ಲಿನ ಕಡುಬಡವರಿಗೆ ತುಂಬ ಪ್ರಯೋಜನವಾಗಿರುವುದಕ್ಕೆ ಈ ಸಲದ ಚುನಾವಣೆಯ ಫಲಿತಾಂಶವೇ ಸಾಕ್ಷಿ ನೀಡಿದೆ. ಅನ್ನಭಾಗ್ಯ ಯೋಜನೆ ಬಡವರನ್ನು ತಲುಪಿದ ಯೋಜನೆಯೆಂದರೆ ತಪ್ಪಿಲ್ಲ.

ಯಾವುದೇ ಕಲ್ಯಾಣ ಕಾರ್ಯಕ್ರಮಗಳು ಎಂದಿಗೂ ವ್ಯರ್ಥವಾಗುವುದಿಲ್ಲ. ಅವುಗಳಿಂದ ವಿವಿಧ ರೀತಿಯ ಪ್ರಯೋಜನಗಳಾಗುತ್ತವೆ. ಉದಾಹರಣೆಗೆ ಹೇಳುವುದಾದರೆ ಮನೆಯೊಡತಿಗೆ ನೀಡುವ 2ಸಾವಿರ ರೂ ಮತ್ತೆ ಮಾರುಕಟ್ಟೆಗೇ ಬರುತ್ತದೆ. ನೀವು ಬಂಡವಾಳಗಾರರಿಗೆ ಸಹಾಯಧನ ನೀಡಿದರೆ ಆತ ತನ್ನ ಆಸ್ತಿ ವೃದ್ಧಿಸಿಕೊಳ್ಳಲು ಅದನ್ನು ಬಳಸುತ್ತಾನೆ. ಬಡವರು ಹಾಗಲ್ಲ, ಅವರು ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವುದರ ಮೂಲಕ ಸರ್ಕಾರ ನೀಡಿದ ಹಣವನ್ನು ಮಾರುಕಟ್ಟೆಗೆ ನೀಡುತ್ತಾರೆ. ಇನ್ನು ಮಹಿಳೆಯರಿಗೆ ಉಚಿತ ಬಸ್ಸಿನ ಪ್ರಯಾಣ ಸಹ ಅವರಿಗೆ ಆರ್ಥಿಕ ಚೈತನ್ಯ ಒದಗಿಸಲು ಸಹಾಯವಾಗುತ್ತದೆ. ದುಡಿಯುವ ಮಹಿಳೆಗೆ ನೀವು ಯಾವುದೇ ಆರ್ಥಿಕ ಸಹಾಯ ನೀಡಿದರೆ ಉಳಿತಾಯದ ಹಣವನ್ನು ಆಕೆ ಕುಟುಂಬಕ್ಕೆ ವೆಚ್ಚ ಮಾಡುತ್ತಾಳೆ. ಒಟ್ಟಾರೆ ಹೇಳುವುದಾದರೆ ಸರ್ಕಾರದ ಐದು ಕಾರ್ಯಕ್ರಮಗಳು ಆರ್ಥಿಕ ದುರ್ಬಲರಿಗೆ ಸಹಾಯ ಮಾಡುವುದರಲ್ಲ ಯಾವುದೇ ಸಂಶಯವಿಲ್ಲ.

ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ 5 ಗ್ಯಾರಂಟಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾರಿ ಸಂಚಲನವನ್ನು ಸೃಷ್ಟಿಸಿದೆ. ಗ್ಯಾರಂಟಿಗಳಿಂದಾಗಿಯೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ ಎಂಬುದು ಬಹುದೊಡ್ಡ ಮಿಥ್ಯ. ಈ ಗ್ಯಾರಂಟಿಗಳಿಂದಾಗಿಯೇ ಕಾಂಗ್ರೆಸ್ ಅಧಿಕಾರಕ್ಕೆ ಬಂತೆಂಬ ವಿರೋಧ ಪಕ್ಷದ ಹೇಳಿಕೆ ಪೂರ್ಣವಾಗಿ ನಿಜವಲ್ಲ. ಅವುಗಳ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ವಿರೋಧ ಪಕ್ಷಗಳು ನಿಷ್ಪಕ್ಷಪಾತವಾಗಿ ಆತ್ಮಾವಲೋಕನ ಮಾಡಿಕೊಂಡರೆ ಅವರಿಗೆ ನಿಜವಾದ ಕಾರಣಗಳು ಗೊತ್ತಾಗುತ್ತದೆ.

ಇಂತಹ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಾಗ ಯಾವುದೇ ಸರ್ಕಾರಕ್ಕೆ ಸ್ಪಷ್ಟವಾದ ಗುರಿಯಿರಬೇಕು. 1992ರಲ್ಲಿ ಕಾಂಗ್ರೆಸ್ ಪಕ್ಷದ ಪ್ರಧಾನಿ ಪಿ.ವಿ.ನರಸಿಂಹರಾವ್ 'ಹೊಸ ಆರ್ಥಿಕ ನೀತಿ'ಯನ್ನು ಅನುಷ್ಠಾನ ಮಾಡಿದ್ದಾರೆ. ಅವರ ಸಚಿವ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಡಾ.ಮನಮೋಹನ ಸಿಂಗ್ ಅವರು ಭಾರತವನ್ನು ಹೊಸ ಆರ್ಥಿಕ ನೀತಿಯಿಂದಾಗಿ ವಿಶ್ವ ಇತ್ತ ನೋಡುವಂತೆ ಮಾಡಿದ್ದಾರೆ. ಹೊಸ ಆರ್ಥಿಕ ನೀತಿಯ ಪ್ರಕಾರ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರ ಖಾಸಗಿಯವರಿಗೆ ಅವಕಾಶ ಕೊಡಬೇಕಾಗಿದೆ. ಇಂದು ವಿಶ್ವದ ಶ್ರೇಷ್ಠ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡುತ್ತಿವೆ. ದೇಶದ ಯುವಜನತೆ ವಿಶ್ವದ ಎಲ್ಲಾ ಕಡೆ ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದಾರೆ. ಇದರಿಂದ ದೇಶದ ಹಾಗೂ ಕುಟುಂಬದ ಆದಾಯ ಹೆಚ್ಚುತ್ತಿದೆ. ಶಿಕ್ಷಣ, ಆರೋಗ್ಯ, ದೂರಸಂಪರ್ಕ ಮತ್ತು ಸಾರಿಗೆ ವಲಯಗಳಲ್ಲಿ ಖಾಸಗಿಯವರ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಉದ್ಯೋಗ ಸೃಷ್ಟಿಗೆ ಈ ಬೆಳವಣಿಗೆ ಪೂರಕವಾಗುತ್ತಿದೆ. ದೇಶದ ನೂರ ನಲವತ್ತು ಕೋಟಿ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು, ಅದು ಒಂದೇ ಪ್ರಕಾರ ಏರುಗತಿಯಲ್ಲಿರುವಂತೆ ನೋಡಿಕೊಳ್ಳುವುದು ಸಾಮಾನ್ಯದ ಕೆಲಸವಲ್ಲ. ಅಂತಹ ಸಂದರ್ಭದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ತಮ್ಮ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಮಾತ್ರ ಕೊಡುವ ಅಗತ್ಯವಿದೆ. ಚುನಾವಣೆಯ ಸಂದರ್ಭದಲ್ಲಿ ಹೇಳುವ ಅನೇಕ ಮಾತುಗಳನ್ನು ವಾಸ್ತವವೆಂದು ನಂಬಿದರೆ ರಾಜ್ಯದ ಆರ್ಥಿಕಸ್ಥಿತಿ ಪಾತಾಳ ತಲುಪುವುದರಲ್ಲಿ ಸಂಶಯವಿಲ್ಲ. ಸರ್ಕಾರದ ಅಂಕಿ–ಅಂಶದ ಪ್ರಕಾರ ರಾಜ್ಯದಲ್ಲಿ 1.27 ಕೋಟಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳೆಂದು ಹೇಳಲಾಗುತ್ತದೆ. ರಾಷ್ಟ್ರೀಯ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಶೇಕಡ 25ರಷ್ಟು ಬಡತನದ ರೇಖೆಗಿಂತ ಕೆಳಗಿದ್ದಾರೆ. ಅಂದರೆ ರಾಜ್ಯ ಸರ್ಕಾರ ಈಗ ಅರ್ಧಕ್ಕಿಂತ ಹೆಚ್ಚಿನ ಜನರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಕೊಡುತ್ತಿದೆ. ಅರ್ಹರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ನೀಡಿದಾಗ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ. ಕಲ್ಯಾಣ ಕಾರ್ಯಕ್ರಮಗಳನ್ನು ಸಿರಿವಂತರಿಗೆ ನೀಡಿದಾಗ ಮಾತ್ರವೇ ತೆರಿಗೆದಾರರ ಹಣ ಪೋಲಾಗುತ್ತಿದೆ ಎನ್ನಬಹುದು.

ಸರ್ಕಾರದ ಯಾವುದೇ ಕಾರ್ಯಕ್ರಮಗಳಾಗಲಿ ಆಡಳಿತಪಕ್ಷ ಮತ್ತು ವಿರೋಧ ಪಕ್ಷಗಳು ಉದಾರವಾಗಿ ನಡೆದುಕೊಳ್ಳಬೇಕು. ಜನತೆಯಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಮೂಡದಂತೆ ಇಬ್ಬರೂ ನಡೆದುಕೊಳ್ಳಬೇಕು. ಶಾಸಕರ ಕ್ಷೇತ್ರದ ಜನತೆಗೆ ಈ ಸೌಲಭ್ಯ ಸಿಗುತ್ತದೆಯೇ ಎಂಬುದು ಮುಖ್ಯವೇ ಹೊರತು ಅವರು ಯಾವ ಪಕ್ಷ ಎಂಬುದು ಮುಖ್ಯವಾಗುವುದಿಲ್ಲ. ವಿರೋಧ ಪಕ್ಷ ಸಹ ಅರ್ಹರಿಗೆ ಈ ಯೋಜನೆಗಳನ್ನು ತಲುಪುವಂತೆ ಎಚ್ಚರಿಕೆ ವಹಿಸಬೇಕು. ಯೋಜನೆಯ ಅನುಷ್ಠಾನದಲ್ಲಿ ದೋಷವಾದಾಗ ಸರ್ಕಾರವನ್ನು ಸೂಕ್ತ ರೀತಿಯಲ್ಲಿ ಪ್ರಶ್ನೆ ಮಾಡಬೇಕು. ಜಾಗೃತ ವಿರೋಧ ಪಕ್ಷಗಳೇ ಜನತೆ ಹಿತವನ್ನು ಕಾಯಬಲ್ಲವು ಎಂಬುದು ರಾಜಕೀಯ ತಜ್ಞರ ಅನಿಸಿಕೆಯಾಗಿದೆ.

ಕೊನೆಯದಾಗಿ ಮಾನ್ಯ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ತಾನು ಹೇಳಿದ್ದ 5 ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲಿ. ಅದರ ಪೂರ್ಣ ಪ್ರಯೋಜನವನ್ನು ಕರ್ನಾಟಕ ರಾಜ್ಯದ ಅರ್ಹ ಫಲಾನುಭವಿಗಳು ಪಡೆಯಲಿ ಎನ್ನುತ್ತಾ, ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿ ಅವರ ಕಲ್ಯಾಣ ಕಾರ್ಯಕ್ರಮಗಳು ರಾಷ್ಟ್ರಕ್ಕೆ ಪ್ರೇರಣೆ ನೀಡಲಿ ಎಂದು ಆಶಿಸುತ್ತೇನೆ.

■ ನಿರೂಪಣೆ: ಶ್ರೀವತ್ಸ



## ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಅಭಿನಂದನೆ

ಪ್ರಸ್ತುತ ಮುಖ್ಯಮಂತ್ರಿಗಳಾಗಿರುವ ಮಾನ್ಯ ಸಿದ್ದರಾಮಯ್ಯ ಅವರು ಮೊದಲ 'ಕನ್ನಡ ಕಾವಲು ಸಮಿತಿ'ಯ ಅಧ್ಯಕ್ಷರಾಗಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸೂಕ್ತ ಸ್ಥಾನಮಾನ ದೊರಕಿಸಿಕೊಟ್ಟ ಕನ್ನಡ ಸಂಸ್ಕೃತಿಯ ನಿರ್ಮಾಪಕರು ಎಂದು ಖ್ಯಾತರಾಗಿದ್ದಾರೆ. 'ನನಗೆ ಹಾರ ತುರಾಯಿ ಬೇಡ, ಕನ್ನಡ ಪುಸ್ತಕಗಳನ್ನು ಕೊಡಿ' ಎಂದು ಮುಖ್ಯಮಂತ್ರಿಯಾದ ತಕ್ಷಣ ಕರೆ ನೀಡಿದವರು ಅವರು. ಅದಕ್ಕನುಗುಣವಾಗಿ ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸ್ಥಾಪಕರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು, ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ ಹುಲಿನಾಯ್ಕರ್ ಮತ್ತು ಪ್ರಜಾಪ್ರಗತಿ ದಿನಪತ್ರಿಕೆ ಸಹ ಸಂಪಾದಕರಾದ ಮಧು ನಾಗಣ್ಣ ಅವರ ಜೊತೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅವರಿಗೆ ಶ್ರೀದೇವಿ ಮೀಡಿಯಾ ಸೆಂಟರ್ ಪ್ರಕಟಿಸುತ್ತಿರುವ 'ಶ್ರೀದೇವಿ ಅಂತರಂಗ' ಮಾಸಪತ್ರಿಕೆ ಮತ್ತು ಸುವರ್ಣಮುಖಿ ಸಂಸ್ಕೃತಿಧಾಮದ ಸ್ಥಾಪಕರಾದ ಆಚಾರ್ಯ ಡಾ.ಎಂ. ನಾಗರಾಜ್ ಅವರ ಜೀವನ ಚರಿತ್ರೆಯ ಗ್ರಂಥಗಳನ್ನು ಅರ್ಪಿಸಿ ಶುಭಕೋರಿದರು. ಆಚಾರ್ಯ ಡಾ.ಎಂ. ನಾಗರಾಜ್ ಅವರ ಗ್ರಂಥವನ್ನು ನೋಡಿ 'ಆಚಾರ್ಯ ಡಾ. ನಾಗರಾಜ್ ಅವರು ಸಲ್ಲಿಸುತ್ತಿರುವ ಸೇವೆ ಅಮೋಘವಾದದ್ದು' ಎಂದು ಮಾನ್ಯ ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟರು.

# ಶ್ರೀದೇವಿ ಮೆಡಿಕಲ್ ಕಾಲೇಜಿನಿಂದ ತುರ್ತು ಚಿಕಿತ್ಸೆ ಅರಿವು
# ವಿಶ್ವ ತುರ್ತು ಚಿಕಿತ್ಸಾ ದಿನದ ಅಂಗವಾಗಿ ವಾಕ್‌ಥಾನ್ ರ್‍ಯಾಲಿ

■ ವಿಶೇಷ ವರದಿ

ವಿಶ್ವ ತುರ್ತು ಚಿಕಿತ್ಸಾ ದಿನದ ಅಂಗವಾಗಿ ಮೇ 27ರಂದು ಶನಿವಾರ ನಗರದಲ್ಲಿ ವಾಕಥಾನ್ ರ್‍ಯಾಲಿ ನಡೆಸಿದ ಶ್ರೀದೇವಿ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ತುರ್ತು ಚಿಕಿತ್ಸೆ ಅಗತ್ಯತೆಯನ್ನು ಪರಿಚಯಿಸಿದರು.

ನಗರದ ಶಿರಾ ರಸ್ತೆಯ ಶ್ರೀದೇವಿ ವೈದ್ಯಕೀಯ ಹಾಗೂ ಸಂಶೋಧನಾ ಆಸ್ಪತ್ರೆ ವತಿಯಿಂದ ಟೌನ್‌ಹಾಲ್ ವೃತ್ತದಿಂದ ಅಮಾನಿಕೆರೆ ವೃತ್ತದವರೆಗೆ ವಾಕ್‌ಥಾನ್ ರ್‍ಯಾಲಿ ನಡೆಸಲಾಯಿತು.

ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್. ಹುಲಿನಾಯ್ಕರ್ ಅವರು ತುರ್ತು ಚಿಕಿತ್ಸೆಯ ಸಮಯದಲ್ಲಿ ಪ್ರಥಮ ಚಿಕಿತ್ಸೆಗೆ ಮೊದಲ ಆದ್ಯತೆ ನೀಡಬೇಕು. ಈ ವರ್ಷದ ವಿಶ್ವ ತುರ್ತು ಚಿಕಿತ್ಸಾ ದಿನಾಚರಣೆಯ ಧ್ಯೇಯ ವಾಕ್ಯ "YOUR SAFETY OUR PRIORITY" ("ನಿಮ್ಮ ಸುರಕ್ಷತೆ ನಮ್ಮ ಆದ್ಯತೆ") ಎಂಬುದಾಗಿದೆ. ಈ ಧ್ಯೇಯವಾಕ್ಯಕ್ಕೆ ಅನುಸಾರವಾಗಿ ನಮ್ಮಲ್ಲಿ ಕೆಲಸ ನಿರ್ವಹಿಸುವ ವೈದ್ಯಕೀಯ ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಿ ಸುಸಜ್ಜಿತಗೊಳಿಸಲಾಗಿದೆ. ಜೊತೆಗೆ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪ್ರತ್ಯೇಕ ತುರ್ತು ಚಿಕಿತ್ಸಾ ಘಟಕ, ತೀವ್ರ ನಿಗಾ ಘಟಕ ಮತ್ತು ಅಪಘಾತ ವಿಭಾಗಗಳನ್ನು ತೆರೆದು ಎಲ್ಲಾ ತರಹದ ತುರ್ತು ಕಾಯಿಲೆಗಳಿಗೆ ಸಂಬಂಧಪಟ್ಟಂತೆ ಚಿಕಿತ್ಸೆಗಳನ್ನು ನೀಡುತ್ತಾ ಬರಲಾಗಿದೆ ಎಂದರು.

ಶ್ರೀದೇವಿ ವೈದ್ಯಕೀಯ ಕಾಲೇಜು ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್ ಮಾತನಾಡಿ ರಸ್ತೆ ಅಪಘಾತ, ಉಸಿರಾಟದ ತೊಂದರೆ, ಹೃದಯ ರೋಗಕ್ಕೆ ಸಂಬಂಧಿಸಿದ ಕಾಯಿಲೆಗಳು, ಇವೆಲ್ಲವೂ ತುರ್ತು ಚಿಕಿತ್ಸಾ ವ್ಯಾಪ್ತಿಗೆ ಬರುತ್ತದೆ. ತುರ್ತು ಸ್ಥಿತಿಯ "ಗೋಲ್ಡನ್ ಅವರ್"ನಲ್ಲಿ ಅತ್ಯುನ್ನತ ಗುಣಮಟ್ಟದ ತುರ್ತು ಆರೈಕೆಯನ್ನು ಒದಗಿಸುವ ಮೂಲಕ ಜೀವಗಳನ್ನು ಉಳಿಸಬಹುದಾಗಿದೆ.




**ತುಮಕೂರಿನ ಶಿರಾ ರಸ್ತೆಯ ಶ್ರೀದೇವಿ ವೈದ್ಯಕೀಯ ಹಾಗೂ ಸಂಶೋಧನಾ ಆಸ್ಪತ್ರೆಯ ವತಿಯಿಂದ ವಿಶ್ವ ತುರ್ತು ಚಿಕಿತ್ಸಾ ದಿನಾಚರಣೆಯ ಅಂಗವಾಗಿ ಮೇ.27 ರಂದು ಶನಿವಾರ ಬೆಳಿಗ್ಗೆ 9 ಗಂಟೆಗೆ ಟೌನ್‌ಹಾಲ್ ವೃತ್ತದಿಂದ ಅಮಾನಿಕೆರೆ ವೃತ್ತದವರೆಗೆ ವಾಕ್‌ಥಾನ್ ರ್‍ಯಾಲಿಗೆ ಚಾಲನೆ ಕೊಡಲಾಯಿತು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರ ಕುಮಾರ್, ಶ್ರೀದೇವಿ ಆಸ್ಪತ್ರೆಯ ತುರ್ತುಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ದೀಪಕ್.ಟಿ.ಜಿ., ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ ಮುಂತಾದವರು ಉಪಸ್ಥಿತರಿದ್ದರು.**

## ತುರ್ತು ಚಿಕಿತ್ಸೆಯೆಂಬುದು ಪ್ರಾಣರಕ್ಷಣೆಯ ಅಸ್ತ್ರ

**ಮೇ 27 ಅನ್ನು ವಿಶ್ವ ತುರ್ತುಚಿಕಿತ್ಸಾ ದಿನವಾಗಿ ಆಚರಿಸುತ್ತಾ ಬರಲಾಗುತ್ತಿದ್ದು, ತುರ್ತು ಚಿಕಿತ್ಸೆಯೆಂಬುದು ಪ್ರಾಣರಕ್ಷಣೆಯ ಅಸ್ತ್ರ. ಇತ್ತೀಚಿನ ದಶಕಗಳಲ್ಲಿ ಹೆಚ್ಚು ಪ್ರಚಲಿತಕ್ಕೆ ಬಂದಿದೆ. ದಿಢೀರ್ ಹೃದಯಘಾತ, ಅಪಘಾತ ಮತ್ತಿತರ ತುರ್ತು ಸಂದರ್ಭಗಳಲ್ಲಿ ಸಕಾಲಕ್ಕೆ ಜೀವ ಉಳಿಸಲು ನೀಡುವ ಚಿಕಿತ್ಸೆ ಅತ್ಯಂತ ಮಹತ್ವದ್ದಾಗಿದೆ. ಕಳೆದೊಂದು ಶತಮಾನದಲ್ಲಿ ವೈದಕೀಯ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳಿವೆ. ಪ್ರತೀ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ವಿಭಾಗಗಳು ತೆರೆಯಲ್ಪಟ್ಟಿದೆ. ಮೆಡಿಕಲ್ ಕಾಲೇಜು , ದೊಡ್ಡ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಯ ಪ್ರತ್ಯೇಕ ಕೇಂದ್ರಗಳೇ ಇದ್ದು, ಐಸಿಯು, ಪರಿಣಿತ ತಜ್ಞವೈದ್ಯರು, ವೈದ್ಯಕೀಯ ಸಿಬ್ಬಂದಿ ಈ ಕೇಂದ್ರದಲ್ಲಿ ಸದಾ ಉಪಸ್ಥಿತರಿರುತ್ತಾರೆ. ಮರಣ ಪ್ರಮಾಣವನ್ನು ತಗ್ಗಿಸಿ ಜೀವ ಉಳಿಸುವ ಆದ್ಯತೆಯೇ ತುರ್ತು ಚಿಕಿತ್ಸೆಯ ಗುರಿಯಾಗಿದ್ದು, ಹೃದಯಘಾತ, ಅಪಘಾತಕ್ಕೆ ಮಾತ್ರ ತುರ್ತು ಚಿಕಿತ್ಸೆಯಲ್ಲ. ಇತರೆ ಜೀವಹಾನಿಯಾಗಬಹುದಾದ ಕಾಯಿಲೆಗಳಿಗೂ ತುರ್ತು ಚಿಕಿತ್ಸೆಯ ಅಗತ್ಯವಾಗಿದೆ. ಇದಕ್ಕಾಗಿಯೇ ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆ ತುರ್ತು ಸಂದರ್ಭದಲ್ಲಿ ರೋಗಿಗಳ ಪ್ರಾಣ ಉಳಿಸಲು ಸಜ್ಜಾಗಿ ನಿಂತಿದ್ದು, ಮೇ 27ರಂದು ಜಾಥಾ ನಡೆಸಿ ಸಾರ್ವಜನಿಕರಿಗೂ ತುರ್ತು ಚಿಕಿತ್ಸೆಯ ಅರಿವನ್ನು ಮೂಡಿಸಿದೆ.**

ಅಪಘತವಾದ ಕೂಡಲೇ ಮೊದಲು ಹತ್ತಿರದ ಆಸ್ಪತ್ರೆಗೆ ಕರೆದೊಯ್ದರೆ ಸಾವಿನ ಪ್ರಕರಣಗಳು ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್.ಪಾಟೀಲ್ ಮಾತನಾಡಿ, ಪ್ರಥಮ ಚಿಕಿತ್ಸೆಯಲ್ಲಿ ವ್ಯಕ್ತಿಯ ಜೀವವನ್ನು ಉಳಿಸಲು ಅನುಸರಿಸುವ ಸರಳ ಪ್ರಕ್ರಿಯೆಯೇ ಪ್ರಥಮ ಚಿಕಿತ್ಸೆಯಾಗಿರುತ್ತದೆ. ಜೀವವನ್ನು ಉಳಿಸಲು ನೆರವಾಗುವ ಪ್ರಥಮ ಚಿಕಿತ್ಸೆಯ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕು. ಇತ್ತೀಚಿಗೆ ರಸ್ತೆ ಅಪಘಾತದ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತಿದೆ. ಆದ್ದರಿಂದ ಸಾರ್ವಜನಿಕರು ಜಾಗೃತಿ ವಹಿಸಬೇಕು ಎಂದರು.

ಶ್ರೀದೇವಿ ಆಸ್ಪತ್ರೆಯ ತುರ್ತುಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ದೀಪಕ್.ಟಿ.ಜಿ.ರವರು ಮಾತನಾಡಿ, ತುರ್ತು ಚಿಕಿತ್ಸಾ ವಿಭಾಗದೊಂದಿಗೆ ಈ ವರ್ಷದ ಧ್ಯೇಯವಾಕ್ಯ "ನಿಮ್ಮ ಸುರಕ್ಷತೆ ನಮ್ಮ ಆದ್ಯತೆ". ನರಮಂಡಲ ಶಸ್ತ್ರಚಿಕಿತ್ಸೆ, ರಸ್ತೆ ಅಪಘಾತಗಳು, ತುರ್ತು ಹೃದಯಬೇನೆ, ಪ್ರಸೂತಿ ತುರ್ತು ಪರಿಸ್ಥಿತಿಗಳು, ಮಕ್ಕಳ ಆರೈಕೆ ಮತ್ತಿತರ ತುರ್ತು ಸಂದರ್ಭಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಹೃದಯ ರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಸುರೇಶ್. ಎಸ್., ಶ್ರೀದೇವಿ ಆಸ್ಪತ್ರೆಯ ತುರ್ತುಚಿಕಿತ್ಸಾ ವಿಭಾಗದ ಡಾ.ದೀಪಕ್.ಟಿ.ಜಿ., ಡಾ.ಈಶ್ವರಯ್ಯ, ಡಾ.ರವೀಶ್, ಡಾ.ಜೀವನ್‌ಕುಮಾರ್, ಡಾ.ರಾಶಿಕ್ ಹಾಗೂ ವಿವಿಧ ವಿಭಾಗದ ವೈದ್ಯರು ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಫಾರ್ಮಸಿ ಕೋರ್ಸ್ ಮತ್ತು ಫಿಸಿಯೋಥೆರಪಿ ಕೋರ್ಸ್‌ಗಳಿಗೆ ಸಾಕಷ್ಟು ಬೇಡಿಕೆ

"ವೈದ್ಯಕೀಯ ಕೋರ್ಸ್‌ಗಳಲ್ಲಿ ಫಾರ್ಮಸಿ ಮತ್ತು ಫಿಸಿಯೋಥೆರಪಿ ಅರೆ ವೈದ್ಯಕೀಯ ಕೋರ್ಸ್‌ಗಳು ಅತ್ಯಂತ ಉಪಯುಕ್ತವಾಗಿವೆ. ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಡುತ್ತಿವೆ. ಅರೆ ವೈದ್ಯಕೀಯ ಕೋರ್ಸ್‌ಗಳ ಅಧ್ಯಯನದಿಂದಲೂ ಉನ್ನತವಾದ ಹುದ್ದೆಗೆ ಆಯ್ಕೆಯಾಗಬಹುದು. ಇಂದು ವೈದ್ಯಕೀಯ ಕ್ಷೇತ್ರಕ್ಕೆ ತಾಂತ್ರಿಕತೆ ಪರಿಣತಿವುಳ್ಳ ಸಿಬ್ಬಂದಿಗಳ ಅವಶ್ಯಕತೆಯಿದೆ. ಈ ಸಿಬ್ಬಂದಿಗಳು ರೋಗಿಗಳಿಗೆ ಉತ್ತಮ ಸೇವೆ ನೀಡಲು ಬದ್ಧರಾಗಿರಬೇಕು. ಇದನ್ನು ಪರಿಗಣಿಸಿ ನಮ್ಮ ಸಂಸ್ಥೆಯಲ್ಲಿ ಫಾರ್ಮಸಿ, ಫಿಸಿಯೋಥೆರಪಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಗುಣಮಟ್ಟದ ಶಿಕ್ಷಣದ ಜೊತೆ ಜೊತೆಯಲ್ಲಿ ವೃತ್ತಿಯ ಯಶಸ್ಸಿಗೆ ಅತ್ಯವಶ್ಯಕವಾದ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್‌ರವರು ತಿಳಿಸಿದರು. ಅವರು ಶ್ರೀದೇವಿ ಶಿಕ್ಷಣ ಸಮೂಹ ಸಂಸ್ಥೆಗಳ ವತಿಯಿಂದ ಶ್ರೀದೇವಿ ಫಾರ್ಮಸಿ ಮತ್ತು ಶ್ರೀದೇವಿ ಫಿಸಿಯೋಥೆರಪಿ ಕಾಲೇಜಿನ ಪ್ರಥಮ ವರ್ಷದ ವತಿಯಿಂದ ನೂತನ ವಿದ್ಯಾರ್ಥಿಗಳಿಗೆ ಮೇ.25 ರಂದು ಹಮ್ಮಿಕೊಂಡಿದ್ದ ಸ್ವಾಗತ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು..

ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಸೆಲೆಸ್ಟ್ ಫಾರ್ಮಾ ನಿರ್ದೇಶಕರು ಮತ್ತು ಪೀಣ್ಯ ಫಾರ್ಮಾಸ್ಯುಟಿಕಲ್ಸ್‌ನ ಎಂ.ಎಸ್. ಅರುಣ್ ಅವರು ಮಾತನಾಡುತ್ತಾ "ವೈದ್ಯರಿಗೆ ನೆರವಾಗುವ ಕೋರ್ಸ್‌ಗಳನ್ನು ಅಧ್ಯಯನ ಮಾಡುವವರು ಶ್ರದ್ಧೆ, ಕಠಿಣ ಪರಿಶ್ರಮದಿಂದ ಕಲಿಯುವುದು ಅವಶ್ಯಕವಾಗಿದೆ. ವಿದ್ಯಾರ್ಥಿಗಳು, ತಮ್ಮ ಜೀವನದಲ್ಲಿ ಗುರಿಯೊಂದು ಇದ್ದರೆ ಏನು ಬೇಕಾದರೂ ಸಾಧಿಸಬಹುದು. ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಮೊದಲನೇ ವರ್ಷದಿಂದಲೇ ಸಂಶೋಧನಾ ಮತ್ತು ಅಭಿವೃದ್ಧಿ ಕಡೆಗೆ ಗಮನಹರಿಸಬೇಕು" ಎಂದು ಹೇಳಿದರು.

ತಾವು ಅಧ್ಯಯನ ಮಾಡುವುದರ ಜೊತೆಗೆ ಹೊಸ ಔಷಧಿಗಳ ಅವಿಷ್ಕಾರಕ್ಕೆ ಒತ್ತು ಕೊಡಬೇಕು. ಭಾರತದಲ್ಲಿ ಕಾಲೇಜು ಮತ್ತು ಕಂಪನಿಗಳ ಮಧ್ಯೆ ದೊಡ್ಡ ಕಂದಕವಿದ್ದು ಅದು ನಿವಾರಣೆಯಾದರೆ ಇನ್ನೂ ಹೆಚ್ಚಿನ ಸಂಶೋಧನೆ ಮತ್ತು ಅವಿಷ್ಕಾರಗಳು ಜರಗಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಸ್ಥೆ ಶ್ರೀದೇವಿ ಫಾರ್ಮಸಿ ಕಾಲೇಜು ಜೊತೆ ಕ್ಲಿನಿಕಲ್ ಟ್ರಯಲ್ ಮತ್ತು ಇನ್‌ಕ್ಯೂಬ್ಯೂಷನ್ ಸೆಂಟರ್ ಮಾಡಲು ಉತ್ಸುಕವಾಗಿರುವುದು ಸಂತೋಷದ ವಿಚಾರ ಎಂದರು.

ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯ ಫಿಸಿಯೋಥೆರಪಿಸ್ಟ್ ವಿಭಾಗದ ಮುಖ್ಯಸ್ಥೆಯಾದ ಡಾ.ಪದ್ಮಾ ರಾಜೇಶ್ ಧರಗರೆ ಅವರು ಮಾತನಾಡುತ್ತಾ "ವಿದ್ಯಾರ್ಥಿಗಳು ತ್ಯಾಗ, ಸಹನೆ, ವಿಶ್ವಾಸವನ್ನು ವೃತ್ತಿಜೀವನದಲ್ಲಿ ಮುಂದುವರೆಸಿಕೊಂಡು ಹೋಗಬೇಕು. ಶ್ರದ್ಧೆಯಿಂದ ರೋಗಿಗಳಿಗೆ ಚಿಕಿತ್ಸೆ ನೀಡಿದರೆ ವಿದ್ಯಾರ್ಥಿಗಳು ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ" ಎಂದರು. ಕಾರ್ಯಕ್ರಮದಲ್ಲಿ 1997ನೇ ಬ್ಯಾಚ್‌ನ ಎಸ್.ಸಿ.ಪಿ.ಟಿ. ಸಂಸ್ಥಾಪಕರು ಜಮ್ಮುವಿನ ಸ್ವಾಸ್ಥ್ಯ ಶಾಸ್ತ್ರ (Physiotherapy) ಡಾ.ಗೌರವ್ ವೈದ್ ಅವರು ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಯಾವ ಯಾವ ರೀತಿಯಲ್ಲಿ ಪ್ರಾಮುಖ್ಯತೆ ನೀಡಬೇಕು ಎಂಬುದನ್ನು ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳಿಗೆ ವಿವರಿಸಿದರು.




**ಚಿತ್ರದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಬೆಂಗಳೂರಿನ ಸೆಲೆಸ್ಟ್ ಫಾರ್ಮಾ ನಿರ್ದೇಶಕರು ಮತ್ತು ಪೀಣ್ಯ ಫಾರ್ಮಾಸ್ಯುಟಿಕಲ್ಸ್‌ನ ಎಂ.ಎಸ್.ಅರುಣ್, ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯ ಫಿಸಿಯೋಥೆರಪಿಸ್ಟ್ ವಿಭಾಗದ ಮುಖ್ಯಸ್ಥೆ ಡಾ.ಪದ್ಮಾ ರಾಜೇಶ್ ಧರಗರೆ, ಜಮ್ಮುವಿನ ಸ್ವಾಸ್ಥ್ಯ ಶಾಸ್ತ್ರ ಡಾ.ಗೌರವ್ ವೈದ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಪ್ರೊ.ಟಿ.ವಿ.ಬ್ರಹ್ಮದೇವಯ್ಯ, ಡಾ,ಲಾವಣ್ಯ, ಶ್ರೀದೇವಿ ಫಾರ್ಮಸಿ ಪ್ರಾಂಶುಪಾಲರಾದ ಡಾ.ಬಿ.ಗೋಪಾಲಕೃಷ್ಣ, ಶ್ರೀದೇವಿ ಫಿಸಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಎ.ಆನಂದಿ ಮುಂತಾದವರು ಉಪಸ್ಥಿತರಿದ್ದರು.**

■ ವರದಿ: ಎನ್. ಆನಂದ

ಅರ್ಚನೆ



ಡಾ. ಕೆ. ಅನಂತರಾಮು
ನಿವೃತ್ತ ಪ್ರಾಧ್ಯಾಪಕರು, ಮೈಸೂರು

# ಶ್ರೀಮಾತೆಯರ ಬದುಕಿನ ಸಂಕೀರ್ಣ ಕ್ಷಣಗಳು ಭಗವಂತನು ಸ್ತ್ರೀಯಾಗಿ ಅವತರಿಸುವ ಸಡಗರ

**ಕಳೆದ ಸಂಚಿಕೆಯಲ್ಲಿ:** ಪ್ರಾಪ್ತ ವಯಸ್ಸಿಗೆ ಶ್ರೀಮಾತೆ ಬಂದಾಗ ಅವರನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಬರಲಾಗುತ್ತದೆ. ಅಲ್ಲಿನ ಅತಿ ಸಣ್ಣ ಕೊಠಡಿಯಲ್ಲಿ ವಾಸ ಮಾಡುವ ಶ್ರೀಮಾತೆ ಶ್ರೀರಾಮಕೃಷ್ಣ ಪರಮಹಂಸರಿಗೂ ಬಂದ ಅತಿಥಿಗಳಿಗೂ ಅಡುಗೆ ಮಾಡಿ ಊಟ ಬಡಿಸುತ್ತಾರೆ. ಜೊತೆಗೆ ಅಧ್ಯಾತ್ಮದಲ್ಲಿ ಶ್ರೀ ರಾಮಕೃಷ್ಣಪರಮಹಂಸರ ಮಾರ್ಗದರ್ಶನದಲ್ಲಿ ಕಠಿಣ ಸಾಧನೆ ಮಾಡುತ್ತಾರೆ. ಪರಮಹಂಸ ದಂಪತಿ ಬದುಕಿನುದ್ದಕ್ಕೂ ತೀವ್ರವಾದ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತಾರೆ. ಶ್ರೀಮಾತೆ ಅಧ್ಯಾತ್ಮ ಸಾಧನೆಯನ್ನು ಕಂಡು ಬೆರಗಾಗಿ ಶ್ರೀ ರಾಮಕೃಷ್ಣ ಪರಮಹಂಸರೇ ಅವರಲ್ಲಿ ಶ್ರೀ ಕಾಳಿದೇವಿಯನ್ನು ಕಂಡು ಸ್ವತಃ ತಾವೇ ಶ್ರೀಮಾತೆಗೆ ಪೂಜೆ ಮಾಡುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರು ಗಂಟಲು ಕ್ಯಾನ್ಸರ್‌ನಿಂದ ನಿಧನರಾದ ಬಳಿಕ ಶ್ರೀಮಾತೆ ಅವರು ಕಠೋರ ಸಾಧನೆಯ ಮೂಲಕ ಕರ್ಮಯೋಗ ಜೀವನ ನಡೆಸುತ್ತಾರೆ. ಅವರ ಆದರ್ಶ ಬದುಕನ್ನು ಓದಿ...

## ಮಂತ್ರದೀಕ್ಷೆಯಲ್ಲಿ ಉದಾರತೆ

ಶ್ರೀಮಾತೆಯವರು ಬೇಡಿಬಂದವರಿಗೆಲ್ಲ ಅವರ ಯೋಗ್ಯತೆಯನ್ನೇನೂ ಪರೀಕ್ಷಿಸದೆ ಮಂತ್ರದೀಕ್ಷೆಯನ್ನು ದಯಪಾಲಿಸಿ ಬಿಡುತ್ತಿದ್ದರು. ಹಾಗೆ ಮಂತ್ರದೀಕ್ಷೆ ಪಡೆದವರಲ್ಲಿ ಕೆಲವರು ಜಪ ಮಾಡುವುದನ್ನೇ ಮರೆತರೆ ಮತ್ತೆ ಕೆಲವರು ತಾವು ಪಡೆದುಕೊಂಡ ಮಂತ್ರವನ್ನೇ ಮರೆತುಬಿಡುತ್ತಿದ್ದರು. ಅದನ್ನೆಲ್ಲ ಶ್ರೀಮಾತೆಯವರು ತಮ್ಮ ದಿವ್ಯದೃಷ್ಟಿಯಿಂದ ಅರಿತು, ಅವರ ಕ್ಷೇಮಕ್ಕಾಗಿ, ತಾವೇ ಮಂತ್ರಜಪ ಮಾಡುತ್ತಿದ್ದರು. ರಾತ್ರಿಯ ಗೃಹಕೃತ್ಯಗಳನ್ನೆಲ್ಲಾ ಮುಗಿಸಿ ಜಪಕ್ಕೆ ಕುಳಿತರೆ, ನಡುರಾತ್ರಿ ದಾಟಿಬಿಡುತ್ತಿತ್ತು. ಕೆಲವರಿಗೆ ಅವರ ಸ್ವಪ್ನದಲ್ಲಿಯೇ ಮಂತ್ರದೀಕ್ಷೆ ಕೊಟ್ಟುಬಿಡುತ್ತಿದ್ದರು. ಅವರುಗಳಾದರೋ ಶ್ರೀಮಾತೆಯವರನ್ನು ನೋಡಿಯೇ ಇರುತ್ತಿರಲಿಲ್ಲ. ಆಮೇಲೆ ಅವರು ಪ್ರತ್ಯಕ್ಷವಾಗಿ ಯಾರಿಂದಲಾದರೂ ಮಂತ್ರದೀಕ್ಷೆ ಪಡೆದುಕೊಳ್ಳಬೇಕೆಂದು ಸುಲಭಸಾಧ್ಯರಾದ ಶ್ರೀಮಾತೆಯವರಲ್ಲಿಗೆ ಬರುತ್ತಿದ್ದರು. ಆಗ ಅವರು ತಮ್ಮ ಕನಸಿನಲ್ಲಿ ಬಂದಿದ್ದವರೇ ಇವರು ಎಂದು ಸಂಭ್ರಮಿತರಾಗುತ್ತಿದ್ದರು.

ಶ್ರೀಮಾತೆಯವರು ಅನೇಕ ಪತಿತರನ್ನು ಹಿಂದುಮುಂದು ನೋಡದೆ ತಮ್ಮ ಪ್ರೇಮಪ್ರವಾಹದಲ್ಲಿ ಮೀಯಿಸಿಬಿಟ್ಟರು. ಅಮ್ಮಾ ಎಂದರೆ ಸಾಕು, ಕರಗಿಹೋಗುವ ಸ್ವಭಾವದ ಶ್ರೀಮಾತೆಯವರು, ಅನೇಕರ ಪಾಪಗಳನ್ನು ತಾವೇ ಹೊತ್ತುಕೊಂಡರು.

## ದಿವ್ಯತೆಯ ಪ್ರತಿಮೂರ್ತಿ ಶ್ರೀಮಾತೆ

ಶ್ರೀಮಾತೆಯವರಿಗೆ ತಮ್ಮ ದಿವ್ಯತೆಯ ಅರಿವಿತ್ತಾದರೂ ಅದನ್ನು ಪ್ರಕಟಿಸುತ್ತಿರಲಿಲ್ಲ. ತ್ರಿವೇಣಿಸಂಗಮದ ಸರಸ್ವತಿ ನದಿಯಂತೆ ಗುಪ್ತವಾಗಿಯೇ ಇದ್ದುಬಿಡುತ್ತಿದ್ದರು. ಆದರೂ ಅವರ ದಿವ್ಯತೆಯು ಕೆಲವೊಮ್ಮೆ ಪರೋಕ್ಷವಾಗಿ, ಕೆಲವೊಮ್ಮೆ ಪ್ರತ್ಯಕ್ಷವಾಗಿ ಪ್ರಕಟವಾಗಿಬಿಡುತ್ತಿತ್ತು. ಒಮ್ಮೆ ಶ್ರೀಮಾತೆಯವರ ಅಡುಗೆಯ ಹೆಂಗಸನ್ನು ನಾಯಿಯೊಂದು ಮುಟ್ಟಿಬಿಟ್ಟಿತು. ಮಡಿವಂತೆಯಾದ ಮಹಿಳೆ ಆಗ ರಾತ್ರಿಯಾಗಿದ್ದುದರಿಂದ "ಸ್ನಾನ ಮಾಡಬೇಕಲ್ಲಾ, ಈಗೇನು ಮಾಡುವುದು" ಎಂದು ಪರದಾಡತೊಡಗಿದಳು. ಆಗ ಶ್ರೀಮಾತೆಯವರು " ಈ ಚಳಿರಾತ್ರಿಯಲ್ಲಿ ಸ್ನಾನವನ್ನೇನೂ ಮಾಡಬೇಡ, ಕೈಕಾಲು ತೊಳೆದುಕೊಂಡು ಮಡಿಸೀರೆ ಉಟ್ಟುಕೋ ಅಷ್ಟು ಸಾಕು" ಎಂದರು. ಅವಳಿಗೆ ಆ ಸಲಹೆ ಸಮಾಧಾನ ತಂದುಕೊಡಲಿಲ್ಲ, ಆಮೇಲೆ ಶ್ರೀಮಾತೆ " ಸ್ವಲ್ಪ ಗಂಗಾಜಲವನ್ನು ಪಾನ ಮಾಡು" ಎಂದರು. ಅದೂ ಅವಳಿಗೆ ಸಾಕಾಗಲಿಲ್ಲ, ಕೊನೆಗೆ ಶ್ರೀಮಾತೆ "ಹೋಗಲಿ, ಬಂದು ನನ್ನನ್ನು ಮುಟ್ಟು" ಎಂದರು. ಆಗ ಅವಳು ಹಾಗೆಯೇ ಮಾಡಿ ಪರಿಶುದ್ಧಳಾದೆನೆಂದು ಶಾಂತಳಾದಳು. ಶ್ರೀಮಾತೆಯವರ ದಿವ್ಯೌಷಧದ ಅರಿವು ಆ ಅಡುಗೆಯ ಮಹಿಳೆಗೂ ಇತ್ತು, ಶ್ರೀಮಾತೆಯವರಿಗೂ ಇತ್ತು ಎಂಬುದನ್ನು ಈ ಸಂದರ್ಭದಲ್ಲಿ ನಾವು ಗಮನಿಸಬಹುದು. ಯಾವ ಮಾತೆಯನ್ನು ಸ್ಮರಿಸಿಕೊಂಡರೆ ಮತ್ತೆ ಜನ್ಮವೆಂಬುದೇ ಇಲ್ಲವೋ ಅಂತಹ ಮಾತೆಯಾಗಿದ್ದರು ಶ್ರೀಮಾತೆ!

## ಪವಾಡಮಾತೆ ಶ್ರೀಮಾತೆ

"ಯಾವ ಘಟನೆಯನ್ನು ಸಹಜವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ ಎಂದು ಜನರು ತಿಳಿದುಕೊಂಡಿರುತ್ತಾರೋ, ಅಂತಹದ್ದೊಂದು ಸಂಭವಿಸಿದಾಗ ಅದನ್ನೇ 'ಪವಾಡ' ಎಂದು ಕರೆಯುತ್ತಾರೆ. ಪವಾಡ ಮಾಡುವವರು ತಮ್ಮ ಯೋಗಮಾರ್ಗದಿಂದ ಅವನತಿ ಹೊಂದಿಬಿಡುತ್ತಾರೆ ಎಂದು ಪರಮಹಂಸರು ಪವಾಡಗಳನ್ನು ಪುರಸ್ಕರಿಸುತ್ತಿರಲಿಲ್ಲ. ಆದರೆ ಗುಟ್ಟಾಗಿ ಕೆಲವನ್ನು ಅವರು ಮಾಡಿದರು, ವಿವೇಕಾನಂದರೂ ಮಾಡಿದರು. ಅಂತೆಯೇ ಶ್ರೀಮಾತೆಯವರೂ ಭಕ್ತರ ಕಷ್ಟಪರಿಹಾರಕ್ಕಾಗಿ ಕೆಲವು ಪವಾಡಗಳನ್ನು ಮಾಡಿದ್ದರು ಎಂದು ಹೇಳುತ್ತಾ ಸ್ವಾಮಿ ಪುರುಷೋತ್ತಮಾನಂದಜೀ ಮಹಾರಾಜರು 'ಶ್ರೀಶಾರದಾದೇವಿ ಜೀವನಗಂಗಾ' ಎಂಬ ಗ್ರಂಥದಲ್ಲಿ (ಪು.746) ಹಲವು ಘಟನೆಗಳನ್ನು ದಾಖಲಿಸಿದ್ದಾರೆ.

ಪೂರ್ಣಚಂದ್ರಭೌಮಿಕ ಎಂಬಾತನ ಉದ್ಯೋಗ ಕ್ಷೇತ್ರದಲ್ಲಿ ಏನೋ ಕೋಲಾಹಲವಾಗಿ ಅವನು ಸೆರೆಮನೆ ಸೇರಬಹುದಾದ ಪರಿಸ್ಥಿತಿ ಬಂದೊದಗಿಬಿಟ್ಟಿತು. ಆಗ ಅವನು ಶ್ರೀಮಾತೆಯವರ ಪಾದಗಳ ಮೇಲೆ ಬಿದ್ದನು. "ನಿನಗೇನೂ ಆಗುವುದಿಲ್ಲ, ಧೈರ್ಯವಾಗಿರು" ಎಂದು ಶ್ರೀಮಾತೆಯವರು ಆಶೀರ್ವದಿಸಿದರು. ಅದರ ಫಲವಾಗಿ ಪೂರ್ಣಚಂದ್ರಭೌಮಿಕರು ಗಂಡಾಂತರದಿಂದ ಪಾರಾದರು.

ಕೊಲ್ಕೊತ್ತೆಯಿಂದ ಸಾಕಷ್ಟು ದೂರದಲ್ಲಿರುವ ಬರಿಸಾಲ್ ಎಂಬ ಊರಿನಲ್ಲಿ ಸುರೇಂದ್ರನಾಥ ರಾಯ್ ಎಂಬಾತನು ಕ್ಷಯರೋಗಪೀಡಿತನಾಗಿ ಕಂಗೆಟ್ಟು "ಇನ್ನು ನನಗೆ ಸಾವೇ ಗತಿ" ಎಂದು ಹಾಸಿಗೆ ಹಿಡಿದು ಮಲಗಿಬಿಟ್ಟನು. ಕಡೆಗಾಲದಲ್ಲೊಮ್ಮೆ ಶ್ರೀಮಾತೆಯವರ ದರ್ಶನ ಮಾಡಬೇಕು ಎಂಬ ಆಕಾಂಕ್ಷೆ ಅವನ ಮನದಲ್ಲಿ ಮೂಡಿತು. ಅವನು ಪ್ರಯಾಣ ಮಾಡುವ ಸ್ಥಿತಿಯಲ್ಲಿರಲಿಲ್ಲ. ಶ್ರೀಮಾತೆಯವರನ್ನು ಕುರಿತು "ತಾವೊಮ್ಮೆ ಇಲ್ಲಿಗೆ ಬಂದು ನನಗೆ ದರ್ಶನ ಕೊಡಬೇಕು" ಎಂದು ಪತ್ರಮುಖೇನ ಬೇಡಿಕೊಂಡನು. ಶ್ರೀಮಾತೆಯವರಾದರೂ ಅಷ್ಟುದೂರ ಹೋಗುವುದು ಸಾಧ್ಯವೇ? "ನೀನು ನನ್ನ ಭಾವಚಿತ್ರವನ್ನು ಆಗಾಗ ನೋಡುತ್ತಿರು', ಉದ್ಬೋಧನ'ದಲ್ಲಿ ಈ ಸಂಪುಟವನ್ನು ಓದುತ್ತಿರು" ಎಂದು ಆಶೀರ್ವಾದಗಳೊಡನೆ ಬರಿಸಾಲ್‌ಗೆ ಕಳುಹಿಸಿಕೊಟ್ಟರು. ಅವರು ಶ್ರದ್ಧಾಭಕ್ತಿಗಳಿಂದ ಹಾಗೆಯೇ ಮಾಡಿದನು. ಅವನು ಶ್ರೀಮಾತೆಯ ಭಾವಚಿತ್ರವನ್ನು ನೋಡುವಾಗ ಅದರಲ್ಲಿ ಮಾತೆಯೇ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳುತ್ತಿದ್ದರು. 'ಉದ್ಬೋಧನ'ದಲ್ಲಿ ಶ್ರೀಮಾತೆಯವರ ಅಮೃತವಾಣಿಯ ಪಾನ ಮಾಡುತ್ತಿದ್ದನು. ಅದರ ಫಲವಾಗಿ ಸುರೇಂದ್ರನಾಥರಾಯ್ ಮೃತ್ಯುಮುಖದಿಂದ ಮೇಲೆದ್ದು ಬಂದುಬಿಟ್ಟನು. ಶ್ರೀಮಾತೆಯವರ ಸನ್ನಿಧಿಗೆ ಬಂದು, ಅವರ ದರ್ಶನದಿಂದ ಪುನೀತನಾದನು.



## ಮಠ ಸ್ಥಾಪನೆಗೆ ಪ್ರಾರ್ಥನೆ

ಪರಮಹಂಸರ ನಿರ್ವಾಣಾನಂತರ ಅವರ 16 ಮಂದಿ ನೇರಶಿಷ್ಯರೆಲ್ಲರೂ ಅನಾಥರಂತಾಗಿಬಿಟ್ಟರು. ಸರಿಯಾದ ಊಟವಿಲ್ಲ, ಸರಿಯಾದ ವಸತಿಯಿಲ್ಲ, ದಾರುಣವಾದ ದಾರಿದ್ರ್ಯಕ್ಕೆ ಗುರಿಯಾಗಿಬಿಟ್ಟರು. ಯಾವುದೋ ಪಾಳುಮನೆಯೊಂದರಲ್ಲಿ ವಾಸಮಾಡಬೇಕಾಗಿ ಬಂದಿತು. ತಮ್ಮ ಜೀವಿತಕಾಲದಲ್ಲಿಯೇ ಪರಮಹಂಸರು "ನೀವು ಗಯಾ ಕ್ಷೇತ್ರಕ್ಕೆ ಹೋಗಬೇಕು; ಪಿತೃದೇವತೆಗಳಿಗೆ ಪಿಂಡಪ್ರದಾನ ಮಾಡಬೇಕು" ಎಂದು ಅಪ್ಪಣೆ ಕೊಡಿಸಿದ್ದರು. ಶ್ರೀಮಾತೆಯವರು 1890ರಲ್ಲಿ ಗಯಾಕ್ಷೇತ್ರದ ಯಾತ್ರೆಯನ್ನು ಸಂಪನ್ನಗೊಳಿಸಿಕೊಂಡು ಬಂದು, ಪರಮಹಂಸರ ವಾಕ್ಯವನ್ನು ಪರಿಪಾಲಿಸಿದರು, ಆ ಹೊತ್ತಿನಲ್ಲಿ ಶ್ರೀಮಾತೆಯವರು ಅಲ್ಲೊಂದು ಸರ್ವಾಂಗ ಪರಿಪೂರ್ಣವಾದ ಮಠವನ್ನು ನೋಡಿದರು. ಊಟೋಪಚಾರಗಳಿಗೆ ಏನು ವ್ಯವಸ್ಥೆ, ವಸತಿಗೆ ಏನು ವ್ಯವಸ್ಥೆ, ಜಪತಪಾದಿ ಸಾಧನೆಗಳಿಗೆ ಏನು ವ್ಯವಸ್ಥೆ– ಅಬ್ಬಾ! ಎಲ್ಲವನ್ನೂ ನೋಡಿ ಶ್ರೀಮಾತೆಯವರು ಮೂಕವಿಸ್ಮಿತೆಯಾಗಿಬಿಟ್ಟರು! ಅವರೆಲ್ಲಾ ಸನ್ಯಾಸಿವೇಷದ ರಾಜಕುಮಾರರಂತೆ ಕಂಗೊಳಿಸುತ್ತಿದ್ದರು.

ಆಗ ಶ್ರೀಮಾತೆಯವರು ದುಃಖಾಶ್ರುಗಳನ್ನು ಸುರಿಸುತ್ತಾ ಪರಮಹಂಸರನ್ನು ಕುರಿತು "ನನ್ನ ಸನ್ಯಾಸಿ ಮಕ್ಕಳೆಲ್ಲಾ ಒಂದೇ ಅಂಗಿಯನ್ನು ಸರದಿಯ ಪ್ರಕಾರ ಹಾಕಿಕೊಳ್ಳುವ ದೀನಹೀನ ಸ್ಥಿತಿಯಲ್ಲಿದ್ದಾರೆ. ಅವರಿಗೂ ಇಂತಹ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿಕೊಡಬಾರದೇ?" ಎಂದು ಪ್ರಾರ್ಥಿಸಿಕೊಂಡರು. ಮುಂದಕ್ಕೆ ಸ್ವಾಮಿ ವಿವೇಕಾನಂದರು ಮಠವನ್ನು ಸ್ಥಾಪಿಸಿದರು, ಎಲ್ಲಾ ಕೊರತೆಗಳನ್ನು ನೀಗಿಸಿದರು. ಆದರೆ ಆ ಮಹಾಸಂಘದ ಸ್ಥಾಪನೆಗೆ ಶ್ರೀಮಾತೆಯ ಅಶ್ರುಪೂರ್ಣಾಲೋಚನಗಳೇ ಕಾರಣವಾದವು ಎಂಬುದನ್ನು ನಾವು ಗಮನಿಸಬಹುದು.

ಶ್ರೀಮಾತೆಯವರು 1911ರಲ್ಲಿ ತಮ್ಮ 58ನೆಯ ವಯಸ್ಸಿನಲ್ಲಿ ದಕ್ಷಿಣ ಭಾರತ ಯಾತ್ರೆಗೆ ಬಂದರು. ಚೆನ್ನೈನಲ್ಲಿ ರಾಮಕೃಷ್ಣಾಶ್ರಮವನ್ನು ಅತ್ಯಂತ ಶ್ರಮಪಟ್ಟು ಸ್ಥಾಪಿಸಿದ್ದ ಪರಮಹಂಸರ ನೇರಶಿಷ್ಯರಲ್ಲೊಬ್ಬರಾದ ಸ್ವಾಮಿ ರಾಮಕೃಷ್ಣಾನಂದರು ಮಾತೆಯವರ ಯೋಗಕ್ಷೇಮವನ್ನೆಲ್ಲಾ ನೋಡಿಕೊಂಡರು. ರಾಮೇಶ್ವರಕ್ಕೆ ಹೋದಾಗ, ಅಲ್ಲಿ ರಾಮೇಶ್ವರ ದೇವಾಲಯದ ಗರ್ಭಗೃಹವನ್ನು ಹೊಕ್ಕು, ನೂರೆಂಟು ಚಿನ್ನದ ಬಿಲ್ವಪತ್ರೆಗಳಿಂದ ಶ್ರೀಮಾತೆಯವರು ರಾಮೇಶ್ವರಲಿಂಗವನ್ನು ಕೈಯಾರೆ ಪೂಜಿಸಿದರು. ರಾಮೇಶ್ವರ ದೇವಾಲಯದ ಇತಿಹಾಸದಲ್ಲಿ ಅದೊಂದು ಅಪೂರ್ವ ಘಟನೆಯಾಯಿತು. ರಾಮನಾಡಿನ ದೊರೆಯು ವಿವೇಕಾನಂದರ ಶಿಷ್ಯರಾಗಿದ್ದರು. ಅವನು "ರಾಮೇಶ್ವರ ದೇವಾಲಯದ ಆಭರಣಗಳನ್ನೆಲ್ಲಾ ಶ್ರೀಮಾತೆಯವರಿಗೆ ತೋರಿಸಬೇಕು" ಎಂದು ಅರ್ಚಕರಿಗೆ ಆಜ್ಞಾಪಿಸಿದನು. ಶ್ರೀಮಾತೆಯವರು ಆ ಆಭರಣಗಳನ್ನೆಲ್ಲಾ ನೋಡಿ ಸಂತಸಪಟ್ಟರೇ ವಿನಃ, ತಮಗೆ ಬೇಕೆಂದು ಯಾವುದೇ ಆಭರಣದತ್ತ ಬೆಟ್ಟುಮಾಡಲಿಲ್ಲ.

ಅಲ್ಲಿಂದ ಶ್ರೀಮಾತೆಯವರು ಕನ್ನಡನಾಡಿನ ಭಾಗ್ಯವೋ ಎಂಬಂತೆ ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣಾಶ್ರಮಕ್ಕೆ ಆಗಮಿಸಿದರು, ರೈಲಿನಿಂದಿಳಿಯುವಾಗಲೇ ಭಕ್ತವೃಂದದವರು ಶ್ರೀಮಾತೆಯವರ ಮೇಲೆ ಅಕ್ಷರಶಃ ಹೂವಿನಮಳೆಯನ್ನು ಕರೆದರು. ಆ ಸಂಭ್ರಮವನ್ನು ಶ್ರೀಮಾತೆ ಪುಟ್ಟಬಾಲೆಯಂತೆ ಆಸ್ವಾದಿಸಿದರು. ಒಂದು ಸಂಧ್ಯಾಕಾಲದಲ್ಲಿ ಶ್ರೀಮಾತೆಯವರು ಆಶ್ರಮದ ಹಿಂಬದಿಯ ಎತ್ತರವಾದ ವಿಶಾಲವಾದ ಬಂಡೆಗಲ್ಲಿನ ಮೇಲೆ ಕುಳಿತು ಸುತ್ತಲಿನ ಸುಮನೋಹರ ದೃಶ್ಯಾವಳಿಗಳನ್ನು ನೋಡುತ್ತಾ ಸಮಾಧಿಸ್ಥರಾಗಿಬಿಟ್ಟರು. ಮಾತೆಯ ನೆನಪಿನಲ್ಲಿ ಈಗ ಅಲ್ಲೊಂದು ಆಕರ್ಷಕ ಸ್ಮಾರಕವನ್ನು ನಿರ್ಮಿಸಿದ್ದಾರೆ. ಅದೆಲ್ಲವೂ ಶ್ರೀಮಾತೆಯವರ ಪಾದಸ್ಪರ್ಶದಿಂದ ಪುನೀತವಾದ ಪುಣ್ಯಭೂಮಿ ಎಂಬುದನ್ನು ಸದಾಕಾಲ ಭಕ್ತವೃಂದಕ್ಕೆ ನೆನಪಿಸುತ್ತಿರುತ್ತದೆ.

## ಇಕ್ಕಟ್ಟಿಗೆ ಸಿಲುಕಿದಾಗಲೂ ದಿಟ್ಟ ಉತ್ತರ

ಕೋಲ್ಕೊತ್ತೆಯ ವೈದ್ಯರಾದ ಡಾ.ಜ್ಞಾನೇಂದ್ರನಾಥ ಕಂಜೀಲಾಲ್ ಎಂಬಾತನು ಶ್ರೀಮಾತೆಯವರ ಭಕ್ತನಾಗಿ ಜಯರಾಮ ಬಾಟಿಗೂ ಹೋಗಿದ್ದನು. ಆ ಹೊತ್ತಿನಲ್ಲಿ ಅಸಹಾಯಕರಾದ ಗ್ರಾಮೀಣ ಜನರ ಚಿಕಿತ್ಸೆಗೆಂದು ಒಂದಿಷ್ಟು ಔಷಧಿಗಳನ್ನು ಜೊತೆಯಲ್ಲಿ ಒಯ್ದಿದ್ದನು. ಅದರಿಂದ ಅಲ್ಲಿಯ ಜನರಿಗೆ ತುಂಬಾ ಉಪಕಾರವಾಯಿತು. ಶ್ರೀಮಾತೆಯವರು ಕಂಜೀಲಾಲನನ್ನು 'ಇವನು ನನ್ನ ವರಪುತ್ರ' ಎಂದೇ ಕೊಂಡಾಡಿದರು.

ಇಷ್ಟೆಲ್ಲಾ ಆದರೂ ಕಂಜೀಲಾಲನ ಪತ್ನಿಯ ಬೇಡಿಕೆಯನ್ನು ಈಡೇರಿಸುವಲ್ಲಿ ಶ್ರೀಮಾತೆ ಜಾಗೃತರಾಗಿದ್ದುದು ಅನನ್ಯವಾಗಿತ್ತು. ಒಂದು ದಿನ ಕಂಜೀಲಾಲನ ಹೆಂಡತಿ ಶ್ರೀಮಾತೆಯವರ ಬಳಿಗೆ ಬಂದು "ನಿಮ್ಮ ಮಗನ ವೃತ್ತಿಯಲ್ಲಿ ಅಭಿವೃದ್ಧಿಯಾಗುವಂತೆ ನೀವು ಹರಸಬೇಕು ಅಮ್ಮಾ" ಎಂದು ಬೇಡಿಕೊಂಡಳು. ಶ್ರೀಮಾತೆಯ ವಿವೇಕವನ್ನು ಕೇಳಬೇಕೆ! "ನಾನು ಹಾಗೆ ಆಶೀರ್ವಾದ ಮಾಡಿದರೆ, ಜನರು ಹೆಚ್ಚುಹೆಚ್ಚಾಗಿ ಕಾಯಿಲೆ ಬೀಳಲಿ, ಅವರೆಲ್ಲಾ ಚಿಕಿತ್ಸೆಗಾಗಿ ನನ್ನ ಮಗನ ಬಳಿಗೆ ಬರಲಿ ಎಂದು ಬಯಸಿದಂತಾಗುತ್ತದೆ. ಅದನ್ನು ನಾನೊಲ್ಲೆ " ಎಂದು ಹೇಳಿಬಿಟ್ಟರು.

ಬೇಲೂರು ಮಠದಲ್ಲಿ ದುರ್ಗೆಯನ್ನು ಪೂಜಿಸಿ ವಿಜಯದಶಮಿಯಂದು ಗಂಗಾನದಿಯಲ್ಲಿ ವಿಸರ್ಜಿಸುವ ವೈಭವ ಅವರ್ಣನೀಯವಾದುದು. ಒಂದಾನೊಂದು ವರ್ಷದಲ್ಲಿ ಆ ವಿಸರ್ಜನೆಯ ಮೆರವಣಿಗೆಯ ವೇಳೆಯಲ್ಲಿ ಉತ್ಸಾಹಿಗಳೆಲ್ಲರೂ ನರ್ತನ ಮಾಡುತ್ತಿದ್ದರು. ಕಂಜೀಲಾಲನೂ ಆ ನರ್ತನದಲ್ಲಿ ಸೇರಿಕೊಂಡು ತನ್ನ ಮುಖವನ್ನು ಚಿತ್ರವಿಚಿತ್ರವಾಗುವಂತೆ ತಿರುಗಿಸುತ್ತಿದ್ದನು. ಮಠದ ಕೆಲವು ಬ್ರಹ್ಮಚಾರಿಗಳು "ಹಾಗೆಲ್ಲಾ ಮಾಡಬೇಡ" ಎಂದು ಕಂಜೀಲಾಲನನ್ನು ತಡೆಯುವ ಯತ್ನ ಮಾಡಿದರು. ಆಮೇಲೆ ಅದನ್ನೆಲ್ಲಾ ವೀಕ್ಷಿಸುತ್ತಿದ್ದ ಮಾತೆಯವರ ಬಳಿಗೂ ಆ ದೂರು ಬಂದಿತು. ಆಗ ಶ್ರೀಮಾತೆಯವರು "ಇದರಲ್ಲೇನೂ ದೋಷವಿಲ್ಲ, ದುರ್ಗಾಮಾತೆಯನ್ನೂ ಈ ರೀತಿ ಸಂಗೀತ, ನರ್ತನ ಮತ್ತು ತಮಾಷೆಗಳ ಮೂಲಕ ಸಂತೋಷಪಡಿಸಬೇಕು" ಎಂದು ಹೇಳಿಬಿಟ್ಟರು. ದೇವಿಯ ಸನ್ನಿಧಿಯಲ್ಲಿ ಗಂಭೀರವಾದ ವೇದಘೋಷಕ್ಕೆ ಯಾವ ಸ್ಥಾನವಿದೆಯೋ ಅಂತಹ ಸ್ಥಾನವು ತಮಾಷೆಯ ಕುಣಿತಕ್ಕೂ ಇದೆ ಎಂಬುದನ್ನು ಶ್ರೀಮಾತೆ ಸ್ಪಷ್ಟಪಡಿಸಿದರು.

(ಮುಂದುವರಿಯುತ್ತದೆ)

Printed and Published by **Shridevi Media Center,** Lingapura, NH 4, Sira Road, Tumakuru - 572106,, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**